(1)

2015-16 ಕ್ರಿಯಾಯೋಜನೆ

[illegible]

[illegible] – [illegible]

[illegible]

# ಕರ್ನಾಟಕ ಸರ್ಕಾರ

ಸಂಖ್ಯೆ:ಕಸಂವಾ 126 ಕೆಎಂಯು 2015.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:23/07/2015.

## ಸೇರ್ಪಡೆ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಸಂಬಂಧಿಸಿದಂತೆ, 2015-16ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಮುಂದುವರೆದ ಯೋಜನಾ ಕಾರ್ಯಕ್ರಮಗಳಿಗೆ ಕೆಲವು ಷರತ್ತಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಿ ಹೊರಡಿಸಿರುವ ಆದೇಶ ಸಂಖ್ಯೆ:ಕಸಂವಾ 80 ಕೆಎಂಯು 2015 ದಿನಾಂಕ 06/06/2015ರ ಆದೇಶದ ಭಾಗದಲ್ಲಿ ಈ ಕೆಳಕಂಡ ಎರಡು ಪ್ರಸ್ತಾವನೆಗಳನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

(ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ | 2015-16ನೇ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನ |
|---|---|---|---|
| 1. | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು ಬಂಡಹಳ್ಳಿ ಗ್ರಾಮ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯ ಸಂರಕ್ಷಣಾ ಕಾಮಗಾರಿ. | 41.00 | 5.00 |
| 2 | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಲ್ಲೂಕು ದೊಡ್ಡಿಂದವಾಡಿ ಗ್ರಾಮ ಶ್ರೀ ಶಿವನ (ಶ್ರೀನಂಜುಡೇಶ್ವರ) ದೇವಾಲಯದ ಸಂರಕ್ಷಣಾ ಕಾಮಗಾರಿ. | 53.00 | 5.00 |
| | ಒಟ್ಟು | 94.00 | 10.00 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

G. Annapurna
(ಜಿ.ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ಆಡಳಿತ ಕನ್ನಡ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.

2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ, ದೊಡ್ಡಕೆರೆ ಮೈದಾನ, ಮೈಸೂರು-10.
5. ನಿರ್ದೇಶಕರು, (ವಸ್ತು ಸಂಗ್ರಹಾಲಯ)ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು.
6. ನಿರ್ದೇಶಕರು, (ಪ್ರಾಚ್ಯವಸ್ತು) ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಮೈಸೂರು-10.
7. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಗೋಪುರ, ಅಂಬೇಡ್ಕರ್ ವೀಧಿ, ಬೆಂಗಳೂರು.
8. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ , ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7&8), ವಿಧಾನ ಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸ ಸೌಧ, ಬೆಂಗಳೂರು
14. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
15. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ,, ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗ್ಯಾಜೆಟಿಯರ್ ಇಲಾಖೆ ಮತ್ತು ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆಗಳ 2015-16ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ದಿ:09-04-2015ರ ಅ.ಸ. ಪತ್ರ ಸಂಖ್ಯೆ: ಪಿಡಿ/15/ಐಎಂಎಂ/2015.
2. ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಪತ್ರ ಸಂಖ್ಯೆ:ಅಪ್ರಾಸಂಪ/ಲೆ.ಅ/ಲೆ.ಶಾ 2014-15, ದಿನಾಂಕ:10/04/2015.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಸಂಬಂಧಪಟ್ಟ ಆಡಳಿತ ಇಲಾಖಾ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಯೋಜನಾ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳ ನೋಡಲ್ ಅಧಿಕಾರಿಗಳನ್ನೊಳಗೊಂಡ ಸಮಿತಿಯ ಸಭೆ ನಡೆಸಿ, 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿನ ಘೋಷಣೆಯ ಅನುಸಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮಾರ್ಪಾಡು ಇಲ್ಲದ/ ಹೆಚ್ಚುವರಿ ಘಟಕಗಳನ್ನು ಒಳಗೊಳ್ಳದ ಮುಂದುವರೆದ ಯೋಜನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶವನ್ನು ದಿನಾಂಕ: 01-04-2015 ರಿಂದ ಜಾರಿಗೆ ಬರುವಂತೆ ಹೊರಡಿಸಿ, ಅದರ ಪ್ರತಿಯನ್ನು ನಿರ್ದೇಶಕರು (ಪಿ.ಎಂ.ಐ) ಯೋಜನಾ ಇಲಾಖೆಗೆ ಮಾಹಿತಿಗಾಗಿ ಕಳುಹಿಸಿ ಕೊಡುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಕೋರಿರುತ್ತಾರೆ.

2014-15ನೇ ಸಾಲಿನ ಯೋಜನಾ ಕಾರ್ಯಕ್ರಮಗಳನ್ನು 2015-16ನೇ ಸಾಲಿನಲ್ಲಿ ಮುಂದುವರೆಸುವ ಬಗ್ಗೆ ಮೇಲೆ ಓದಲಾದ ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಯವರ ಅಧ್ಯಕ್ಷತೆಯಲ್ಲಿ ದಿನಾಂಕ:13-04-2015 ಮತ್ತು 15-04-2015 ರಂದು ನಡೆದ ಸಭೆಯಲ್ಲಿ ಆರ್ಥಿಕ ಮತ್ತು ಯೋಜನಾ ಇಲಾಖೆಯ ನೋಡಲ್ ಅಧಿಕಾರಿಗಳು ಭಾಗವಹಿಸಿದ್ದು, ಸದರಿ ಸಭೆಯಲ್ಲಿ ಈ ವಿಷಯನ್ನು ವಿವರವಾಗಿ ಚರ್ಚಿಸಿ ಅನುಮೋದನೆ ನೀಡಲಾಗಿದೆ. ಅದರಂತೆ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂಖ್ಯೆ:ಕಸಂವಾ 81 ಕೆಎಂಯು 2015.
### ಬೆಂಗಳೂರು, ದಿನಾಂಕ:17/04/2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ-ಎ, ಅನುಬಂಧ-ಬಿ, ಅನುಬಂಧ-ಸಿ ಹಾಗೂ ಅನುಬಂಧ-ಡಿ ರಲ್ಲಿ ಹೇಳಲಾದ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗ್ಯಾಜೆಟಿಯರ್ ಇಲಾಖೆ ಮತ್ತು ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆಗಳ 2015-16ನೇ ಸಾಲಿನ ಮುಂದುವರೆದ ಯೋಜನೆಗಳಿಗೆ ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಷರತ್ತುಗಳು

1. 2014-15ನೇ ಸಾಲಿನಲ್ಲಿ ಮಂಜೂರಾದ ಯೋಜನಾ ಕಾರ್ಯಕ್ರಮಗಳನ್ನು ಮಾತ್ರ ಮುಂದುವರೆಸಬೇಕು. ಈ ಮುಂದುವರೆದ ಯೋಜನೆಗಳು ದಿನಾಂಕ 01/04/2015ರಿಂದ ಅನ್ವಯವಾಗುತ್ತದೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ 2015-16ನೇ ಸಾಲಿನ ಕ್ರಿಯಾಯೋಜನೆಗೆ ತಾತ್ವಿಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಪತ್ರ ಸಂಖ್ಯೆ :ಆಪ್ರಾಸಂಪ/ಲೆಅ/ಲೆಶಾ/2015-16, ದಿನಾಂಕ:07/05/2015.

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ:07/05/2015ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ 2015-16ನೇ ಸಾಲಿಗೆ ಹಂಚಿಕೆ ಮಾಡಲಾದ ಅನುದಾನಕ್ಕೆ ಅನುಗುಣವಾಗಿ ಕ್ರಿಯಾಯೋಜನೆಯನ್ನು ತಯಾರಿಸಿ, ಮುಂದುವರೆದ ಯೋಜನೆಗಳು ಹಾಗೂ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಮಂಜೂರಾತಿ ನೀಡುವಂತೆ ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ರವರು ಸರ್ಕಾರವನ್ನು ಕೋರಿರುತ್ತಾರೆ.

ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸುರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ:ಕಸಂವಾ 80 ಕೆಎಂಯು 2015.**
**ಬೆಂಗಳೂರು, ದಿನಾಂಕ:06/06/2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಸಂಬಂಧಿಸಿದಂತೆ, 2015-16ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಮುಂದುವರೆದ ಯೋಜನಾ ಕಾರ್ಯಕ್ರಮಗಳಿಗೆ ಅನುಬಂಧದಲ್ಲಿ ಸೂಚಿಸಿರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.

**ಷರತ್ತುಗಳು:**

1. 2014-15ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಯೋಜನಾ ಕಾರ್ಯಕ್ರಮಗಳನ್ನು ಹಾಗೂ ಮುಂದುವರಿದ ಯೋಜನಾ ಕಾರ್ಯಕ್ರಮಗಳನ್ನು ಮಾತ್ರ ಮುಂದುವರೆಸಬೇಕು.
2. ಮುಂದುವರೆದ ಯೋಜನಾ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಘಟಕಗಳು ಅಥವಾ ಹೊಸ ಯೋಜನೆಗಳು ಒಳಗೊಂಡಿದ್ದಲ್ಲಿ ಅವುಗಳಿಗೆ ಪ್ರತ್ಯೇಕವಾದ ಪ್ರಸ್ತಾವನೆಗಳನ್ನು ಸಲ್ಲಿಸಿ ನಿಯಮಾನುಸಾರ ಮಂಜೂರಾತಿ ಪಡೆಯಬೇಕು.
3. ಹೊಸ ಸಂಸ್ಥೆಗಳಿಗೆ ಅಥವಾ ಅದೇ ಯೋಜನೆಯ ಹೊಸ ಪ್ರಕರಣಗಳಲ್ಲಿ ಒಳಗೊಂಡಿರುವ ಕೆಲಸಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಸಾಲ ಬಂಡವಾಳ ವೆಚ್ಚ ಸಹಾಯಧನ/ಸೋಡಿ ಮುಂತಾದವುಗಳ ಮಂಜೂರಾತಿ ಇವು ಆಯಾಯ ಬಾಬ್ತುಗಳಿಗೆ ಸಂಬಂಧಿಸಿದ ಪ್ರತ್ಯಾಯೋಜಿತ ಅಧಿಕಾರಗಳ ಪರಿಮಿತಿಯಲ್ಲಿರಬೇಕು.
4. ಆರ್ಥಿಕ ಇಲಾಖೆ ಮಿತವ್ಯಯ ಆದೇಶಗಳಿಗೆ ಒಳಪಡುವ ಸಿಬ್ಬಂದಿ ಸೃಜನೆ, ವಾಹನ ಮತ್ತು ಯಂತ್ರ ಸಾಮಗ್ರಿ ಖರೀದಿ, ಹೊಸ ಕಛೇರಿ ತೆರೆಯುವುದು, ಹೊಸ ಯೋಜನೆಗಳಿಗೆ ಮಂಜೂರಾತಿ, ಇವುಗಳಿಗೆ ಪ್ರತ್ಯೇಕವಾಗಿ ಆರ್ಥಿಕ ಇಲಾಖೆಯ ಹಾಗೂ ಯೋಜನಾ ಇಲಾಖೆಯ ಅನುಮೋದನೆಯನ್ನು ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸುವುದು.
5. ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರರಾದ ಅಧಿಕಾರಿಗಳು ಅವರಿಗೆ ನೀಡಲಾದ ಆರ್ಥಿಕ ಅಧಿಕಾರಕ್ಕೆ ಒಳಪಟ್ಟು ಯೋಜನಾ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು,
6. 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಹಾಗೂ ನಿಯಮಗಳು 2000 ವನ್ನು ಕಡ್ಡಾಯವಾಗಿ ಪಾಲಿಸುವುದು.

...2

7. ಪರಿಶಿಷ್ಠ ಜಾತಿ ಉಪ ಯೋಜನೆ ಹಾಗೂ ಪರಿಶಿಷ್ಠ ಪಂಗಡದ ಉಪ ಯೋಜನೆಯಡಿಯಲ್ಲಿನ ಅನುದಾನ ಹಂಚಿಕೆ ಹಾಗೂ ಕಾಮಗಾರಿಗಳ ಕುರಿತಂತೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿರುವ ಅಧಿಕಾರಯುಕ್ತ ಸಮಿತಿಯ ನಿರ್ಣಯದ ನಂತರ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಕ್ರಮ ಕೈಗೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 1996. ದಿನಾಂಕ:10/07/1996ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಆರ್ಥಿಕ ಇಲಾಖೆಯ ಮತ್ತು ಯೋಜನಾ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
G. Annapurna
(ಜಿ.ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ಆಡಳಿತ ಕನ್ನಡ)

ಪ್ರತಿಯನ್ನು:

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–560001.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–560001.
3. ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು–560001.
4. ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ, ದೊಡ್ಡಕೆರೆ ಮೈದಾನ, ಮೈಸೂರು–10.
5. ನಿರ್ದೇಶಕರು, (ವಸ್ತು ಸಂಗ್ರಹಾಲಯ)ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು.
6. ನಿರ್ದೇಶಕರು, (ಪ್ರಾಚ್ಯವಸ್ತು) ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಮೈಸೂರು–10.
7. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಗೋಪುರ, ಅಂಬೇಡ್ಕರ್ ವೀಧಿ, ಬೆಂಗಳೂರು.
8. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ , ಬೆಂಗಳೂರು.
9. ಹಿರಿಯ ನಿರ್ದೇಶಕರು, ಮುಖ್ಯ ಮೌಲ್ಯಮಾಪನಾಧಿಕಾರಿ ಪ್ರಾಧಿಕಾರ ಕೊಠಡಿ ಸಂಖ್ಯೆ 542, ಬಹುಮಹಡಿ ಕಟ್ಟಡ, ಬೆಂಗಳೂರು.
10. ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–7&8), ವಿಧಾನ ಸೌಧ, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸ ಸೌಧ, ಬೆಂಗಳೂರು
14. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
15. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ 2015-16ನೇ ಸಾಲಿನ ಕ್ರಿಯಾಯೋಜನೆಗೆ ತಾತ್ವಿಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಕಸಂವಾ 80 ಕೆಂಪಯು 2015.ಬೆಂಗಳೂರು, ದಿನಾಂಕ:06/06/2015.

2. ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಪತ್ರ ಸಂಖ್ಯೆ:ಆಪ್ರಾಸಂಪ/ಎಸಿಟಿ.6/ಚಾ.ಜಿ.ಸ್ಕಾ.ಅ/2014-15, ದಿನಾಂಕ:30/06/2015.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಸಂಬಂಧಿಸಿದಂತೆ, 2015-16ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಮುಂದುವರೆದ ಯೋಜನಾ ಕಾರ್ಯಕ್ರಮಗಳಿಗೆ ಕೆಲವು ಷರತ್ತಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ದಿನಾಂಕ:30/06/2015ರಂದು ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, 2015-16ನೇ ಸಾಲಿನ ಕ್ರಿಯಾ ಯೋಜನೆಗೆ ಆದೇಶ ಸಂಖ್ಯೆ:ಕಸಂವಾ 80 ಕೆಂಪಯು 2015, ದಿನಾಂಕ:06/06/2015ರಂದು ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ. ಸದರಿ ಕ್ರಿಯಾ ಯೋಜನೆಯ ಲೆಕ್ಕ ಶೀರ್ಷಿಕೆ 2205-00-103-0-21 (ಯೋಜನೆ) 059 ಇತರೆ ಖರ್ಚುಗಳ ಅಡಿಯಲ್ಲಿ 14 ಸಂಶೋಧನಾ ಪ್ರಕಟಣೆಗಳನ್ನು ಹೊರಡಿಲು ರೂ.38.50 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಆದರೆ, ಲೆಕ್ಕಶೀರ್ಷಿಕೆಯ ಸಂಶೋಧನಾ ಪ್ರಕಟಣೆ ಕಾರ್ಯಕ್ರಮಗಳಡಿ ಮೈಸೂರು ದಸರಾ (ಆಂಗ್ಲ ಆವೃತ್ತಿ) ಪುಸ್ತಕವನ್ನು ಸೇರಿಸಿರುವುದಿಲ್ಲ. ಮೈಸೂರು ದಸರಾ ಆಂಗ್ಲ ಆವೃತ್ತಿ ಪುಸ್ತಕದ ಕರಡು ಸಿದ್ಧವಾಗಿದ್ದು 2015ರ ದಸರಾ ಉತ್ಸವದ ಸಂದರ್ಭದಲ್ಲಿ ಈ ಪುಸ್ತಕವನ್ನು [illegible] ಮಾಡಲು ಇಲಾಖೆಯ ವತಿಯಿಂದ ಪೂರ್ಣಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಆದ್ದರಿಂದ ಈ ಕೆಳಕಂಡ ಸಂಶೋಧನಾ ಪ್ರಕಟಣೆಗಳಡಿ ಮೈಸೂರು ದಸರಾ (ಆಂಗ್ಲ ಆವೃತ್ತಿ) ಪುಸ್ತಕವನ್ನು ಹೊರತರಲು ಈ ಕೆಳಕಂಡ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಿ ಆದೇಶವನ್ನು ನೀಡುವಂತೆ ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ರವರು ಸರ್ಕಾರವನ್ನು ಕೋರಿರುತ್ತಾರೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಕ್ರಿಯಾ ಯೋಜನೆ ಕ್ರಮ ಸಂಖ್ಯೆ | ಕಾರ್ಯಕ್ರಮದ ವಿವರ | 2015-16ನೇ ಸಾಲಿನ ನಿಗದಿತ ಅನುದಾನ | ಪರಿಷ್ಕೃತಗೊಳಿಸಿ ನಿಗದಿತ ಅನುದಾನ |
|---|---|---|---|---|
| 1. | 3 | Hampi Splendor-Reprint | 11.00 ಲಕ್ಷಗಳು | 8.00 ಲಕ್ಷಗಳು |
| 2. | – | ಮೈಸೂರು ದಸರಾ-ಆಂಗ್ಲ ಆವೃತ್ತಿ | 11.00 ಲಕ್ಷಗಳು | 3.00 ಲಕ್ಷಗಳು |

ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

....2

**ಆದೇಶ ಸಂಖ್ಯೆ:ಕಸಂವಾ 127 ಕೆಎಂಯು 2015.**

**ಬೆಂಗಳೂರು, ದಿನಾಂಕ:15/07/2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಸಂಬಂಧಿಸಿದಂತೆ, 2015-16ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಮುಂದುವರೆದ ಯೋಜನಾ ಕಾರ್ಯಕ್ರಮಗಳಿಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಹೊರಡಿಸಿರುವ ಸರ್ಕಾರದ ಆದೇಶವನ್ನು ಪರಿಷ್ಕರಿಸಿ ಈ ಕೆಳಕಂಡ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ: | ಕ್ರಿಯಾ ಯೋಜನೆ ಕ್ರಮ ಸಂಖ್ಯೆ | ಕಾರ್ಯಕ್ರಮದ ವಿವರ | 2015-16ನೇ ಸಾಲಿನ ನಿಗದಿತ ಅನುದಾನ | ಪರಿಷ್ಕೃತಗೊಳಿಸಿ ನಿಗದಿತ ಅನುದಾನ |
|---|---|---|---|---|
| 1. | 3 | Hampi Splendor-Reprint | 11.00 | 8.00 |
| 2. | - | ಮೈಸೂರು ದಸರಾ-ಆಂಗ್ಲ ಆವೃತ್ತಿ | 11.00 | 3.00 |

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಶಿಇ 458 ಐಎಫ್ (ಬಿ&ಎ) 2015, ದಿನಾಂಕ:07/07/2015ರಂದು ನೀಡಿರುವ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 02 ಟಿಎಫ್‌ಪಿ 2015 ದಿನಾಂಕ:09/04/2015ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

G. Annapurna 15/7/15
(ಜಿ.ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ಆಡಳಿತ ಕನ್ನಡ)

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ, ದೊಡ್ಡಕೆರೆ ಮೈದಾನ, ಮೈಸೂರು-10.
5. ನಿರ್ದೇಶಕರು, (ವಸ್ತು ಸಂಗ್ರಹಾಲಯ)ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು.
6. ನಿರ್ದೇಶಕರು, (ಪ್ರಾಚ್ಯವಸ್ತು) ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಮೈಸೂರು-10.
7. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಗೋಪುರ, ಅಂಬೇಡ್ಕರ್ ವೀಧಿ, ಬೆಂಗಳೂರು.
8. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ , ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿನ ಕಂಡಿಕೆಗಳಿಗೆ ತಾತ್ವಿಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**

ಅನಧಿಕೃತ ಟಿಪ್ಪಣಿ ಸಂಖ್ಯೆ:ಅ.ಇ 212 ವೆಚ್ಚ-7/2015, ದಿನಾಂಕ:16/04/2015.

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ:16/04/2015ರ ಅನಧಿಕೃತ ಟಿಪ್ಪಣಿಯಲ್ಲಿ 2014-15ನೇ ಸಾಲಿನ ಲೆಕ್ಕ ಶೀರ್ಷಿಕೆಗಳಡಿ ಅವುಗಳ ಎದುರಿಗೆ ಕಾಣಿಸಿದ ಆಯವ್ಯಯದಲ್ಲಿ ಘೋಷಿಸಿದ ಕಾರ್ಯಕ್ರಮಗಳಿಗೆ ಹೆಚ್ಚುವರಿ ಅನುದಾನ ನಿಗದಿಪಡಿಸಿ ಅನುಷ್ಠಾನಗೊಳಿಸುವಂತೆ ಆರ್ಥಿಕ ಇಲಾಖೆಯು ತಿಳಿಸಿರುತ್ತಾರೆ. ಆದ್ದರಿಂದ 2015-16ನ್ನೇ ಸಾಲಿನ ಆಯವ್ಯಯ ಭಾಷಣದಲ್ಲಿನ ಈ ಕೆಳಕಂಡ ಒಂಬತ್ತು ಪ್ರಸ್ತಾವನೆಗಳಿಗೆ ಯೋಜನಾ ಇಲಾಖೆಯ ಮತ್ತು ಆರ್ಥಿಕ ಇಲಾಖೆಯ ತಾತ್ವಿಕ ಅನುಮೋದನೆಯನ್ನು ಕೋರಲಾಗಿತ್ತು.

1. **ಆಯವ್ಯಯ ಭಾಷಣದ ಕಂಡಿಕೆ-275ರಲ್ಲಿ** ಹಂಪಿ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಜೈನ ಶಾಸನಗಳ ಅಧ್ಯಯನ ಪೀಠವನ್ನು ಶ್ರವಣಬೆಳಗೊಳದಲ್ಲಿ ಸ್ಥಾಪಿಸಲು 1 ಕೋಟಿ ರೂ. ಅನುದಾನ ನೀಡಲಾಗುವುದು.
2. **ಆಯವ್ಯಯ ಭಾಷಣದ ಕಂಡಿಕೆ- 280ರಲ್ಲಿ** ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದ ವಿಶಿಷ್ಟ ವಾಸ್ತು ಶಿಲ್ಪವುಳ್ಳ ಸ್ಮಾರಕಗಳಿರುವ ಬಾದಾಮಿ, ಐಹೊಳೆ ಮತ್ತು ಪಟ್ಟದ ಕಲ್ಲುಗಳೊಳಗೊಂಡ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ರಚನೆಗಾಗಿ ಪ್ರಾಥಮಿಕವಾಗಿ 1 ಕೋಟಿ ರೂ. ನಿಗಧಿಪಡಿಸಲಾಗಿದೆ.
3. **ಆಯವ್ಯಯ ಭಾಷಣದ ಕಂಡಿಕೆ-281ರಲ್ಲಿ** ರಾಜ್ಯದಲ್ಲಿನ ಘೋಷಿತ 772 ಸಂರಕ್ಷಿತ ಸ್ಮಾರಕಗಳ ರಕ್ಷಣೆಗಾಗಿ ಹಂತಹಂತವಾಗಿ ಸಂರಕ್ಷಣೆ, ಪಹರೆ/ಕಾವಲು, ಜಿ.ಐ.ಎಸ್ ಮೂಲಕ ಸರ್ವೇ ಮತ್ತು 3ಡಿ ಮ್ಯಾಪಿಂಗ್, ಸಂರಕ್ಷಣೆ ಹಾಗೂ ಅರಕ್ಷಿತಾ ಸ್ಮಾರಕಗಳ ಇನ್‌ವೆಂಟರಿ ತಯಾರಿಕೆಗಾಗಿ 5 ಕೋಟಿ ರೂಗಳ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು.
4. **ಆಯವ್ಯಯ ಭಾಷಣದ ಕಂಡಿಕೆ-282ರಲ್ಲಿ** ಇಲ್ಲಿಯವರೆಗೆ ಘೋಷಿತ ಪಾರಂಪರಿಕ ಪ್ರದೇಶಗಳಾದ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಕಲಬುರುಗಿ, ವಿಜಯಪುರ, ಕಿತ್ತೂರು, ಬನವಾಸಿ, ಮಳಖೇಡ, ಬಾದಾಮಿ, ತಲಕಾಡು, ಹಳೇಬೀಡು, ಮೇಲುಕೋಟೆ, ಬೇಲೂರು, ಬೆಂಗಳೂರು ನಗರ, ನಾಗಾವಿ, ಲಕುಂಡಿ, ಐಹೊಳೆ, ಬಳ್ಳಿಗಾವಿ, ಸನ್ನತಿ, ಕಮ್ಮಟಿಯನ್ನೊಳಗೊಂಡಂತೆ ಒಟ್ಟಾರೆ 20 ಪಾರಂಪರಿಕ ಪ್ರದೇಶಗಳ ಸಮಗ್ರ ಅಭಿವೃದ್ಧಿಯನ್ನು 20 ಕೋಟಿ ರೂಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು.
5. **ಆಯವ್ಯಯ ಭಾಷಣದ ಕಂಡಿಕೆ-(283)ರಲ್ಲಿ** ಮಳಖೇಡ ಕೋಟೆಯ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿ ಕಾರ್ಯವನ್ನು 5 ಕೋಟಿ ರೂಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು.
6. **ಆಯವ್ಯಯ ಭಾಷಣದ ಕಂಡಿಕೆ-(284)ರಲ್ಲಿ** ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಗೆ ರಾಜ್ಯದಿಂದ ಸೇರ್ಪಡೆಯಾಗಿರುವ 1) ಕಲಬುರುಗಿ, ಬೀದರ್, ವಿಜಯಪುರದಲ್ಲಿರುವ ದಖ್ಖನಿ ಸುಲ್ತಾನರ ವಾಸ್ತುಶಿಲ್ಪ ಸ್ಮಾರಕ ಸಮೂಹಗಳು 2) ಶ್ರೀರಂಗಪಟ್ಟಣ ದ್ವೀಪದಲ್ಲಿನ ಸ್ಮಾರಕ ಸಮೂಹಗಳು. 3) ಬೇಲೂರು ಮತ್ತು ಹಳೇಬೀಡಿನಲ್ಲಿರುವ ಹೊಯ್ಸಳ ವಾಸ್ತುಶಿಲ್ಪ ಸ್ಮಾರಕ ಸಮೂಹಗಳು, ಇವುಗಳನ್ನು ಅಂತಿಮ ಪಟ್ಟಿಗೆ ಸೇರಿಸಲು ಅಗತ್ಯವಿರುವ ಡೋಸಿಯರ್ ಮತ್ತು ವರದಿ ತಯಾರಿಸಿ ಸಲ್ಲಿಸಲು 3 ಕೋಟಿ ರೂಗಳ ಅನುದಾನ ಒದಗಿಸಲಾಗುವುದು.
7. **ಆಯವ್ಯಯ ಭಾಷಣದ ಕಂಡಿಕೆ-(285)ರಲ್ಲಿ** ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕು, ಸುರಪುರದಲ್ಲಿರುವ ದೇವರದಾಸಿಮಯ್ಯನವರಿಗೆ ಸಂಬಂಧಿಸಿದ ಸ್ಮಾರಕಗಳು, ಪುಷ್ಕರಿಣಿಗಳ ಸಂರಕ್ಷಣಾ ಕಾರ್ಯವನ್ನು 2 ಕೋಟಿ ರೂ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

8. **ಆಯವ್ಯಯ ಭಾಷಣದ ಕಂಡಿಕೆ-(286)ರಲ್ಲಿ** ಬೈಲಹೊಂಗಲದಲ್ಲಿರುವ ಧೀಮಂತ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮನವರ ಸಮಾಧಿ ಸ್ಥಳದ ಸಮಗ್ರ ಅಭಿವೃದ್ಧಿ ಕಾರ್ಯವನ್ನು 1 ಕೋಟಿ ರೂ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.
9. **ಆಯವ್ಯಯ ಭಾಷಣದ ಕಂಡಿಕೆ-(287)ರಲ್ಲಿ** ಶಿವಶರಣ ಬಸವಣ್ಣನವರ ಸಮಕಾಲೀನರಾದ ಹರಳಯ್ಯನವರ ಗದ್ದಿಗೆ ಅಭಿವೃದ್ಧಿ ಮತ್ತು ಸಂರಕ್ಷಣೆ ಕಾರ್ಯವನ್ನು 50 ಲಕ್ಷ ರೂಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಕಸಂಪ್ರಾ 90 ಕೆಎಂಯು 2015.**
**ಬೆಂಗಳೂರು, ದಿನಾಂಕ:11/06/2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿನ ಈ ಕೆಳಕಂಡ ಕಂಡಿಕೆಗಳಿಗೆ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.

1. ಹಂಪಿ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಜೈನ ಶಾಸನಗಳ ಅಧ್ಯಯನ ಪೀಠವನ್ನು ಶ್ರವಣಬೆಳಗೊಳದಲ್ಲಿ ಸ್ಥಾಪಿಸಲು 1 ಕೋಟಿ ರೂ. ಅನುದಾನ ನೀಡಲಾಗುವುದು.**(ಆಯವ್ಯಯ ಭಾಷಣದ ಕಂಡಿಕೆ 275)**
2. ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದ ವಿಶಿಷ್ಟ ವಾಸ್ತು ಶಿಲ್ಪವುಳ್ಳ ಸ್ಮಾರಕಗಳಿರುವ ಬಾದಾಮಿ, ಐಹೊಳೆ ಮತ್ತು ಪಟ್ಟದ ಕಲ್ಲುಗಳೊಳಗೊಂಡ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ರಚನೆಗಾಗಿ ಪ್ರಾಥಮಿಕವಾಗಿ 1 ಕೋಟಿ ರೂ. ನಿಗಧಿಪಡಿಸಲಾಗಿದೆ.**(ಆಯವ್ಯಯ ಭಾಷಣದ ಕಂಡಿಕ 280)**
3. ರಾಜ್ಯದಲ್ಲಿನ ಘೋಷಿತ 772 ಸಂರಕ್ಷಿತ ಸ್ಮಾರಕಗಳ ರಕ್ಷಣೆಗಾಗಿ ಹಂತಹಂತವಾಗಿ ಸಂರಕ್ಷಣೆ, ಪಹರೆ/ಕಾವಲು, ಜಿ.ಐ.ಎಸ್ ಮೂಲಕ ಸರ್ವೇ ಮತ್ತು 3ಡಿ ಮ್ಯಾಪಿಂಗ್, ಸಂರಕ್ಷಣೆ ಹಾಗೂ ಅರಕ್ಷಿತಾ ಸ್ಮಾರಕಗಳ ಇನ್‌ವೆಂಟರಿ ತಯಾರಿಕೆಗಾಗಿ 5 ಕೋಟಿ ರೂಗಳ ಯೋಜನೆಯನ್ನು ಹಮ್ಮಿಕೊಳ್ಳ ಲಾಗುವುದು. **(ಆಯವ್ಯಯ ಭಾಷಣದ ಕಂಡಿಕೆ 281)**
4. ಇಲ್ಲಿಯವರೆಗೆ ಘೋಷಿತ ಪಾರಂಪರಿಕ ಪ್ರದೇಶಗಳಾದ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಕಲಬುರುಗಿ, ವಿಜಯಪುರ, ಕಿತ್ತೂರು, ಬನವಾಸಿ, ಮಳಖೇಡ, ಬಾದಾಮಿ, ತಲಕಾಡು, ಹಳೇಬೀಡು, ಮೇಲುಕೋಟೆ, ಬೇಲೂರು, ಬೆಂಗಳೂರು ನಗರ, ನಾಗಾವಿ, ಲಕುಂಡಿ, ಐಹೊಳೆ, ಬಳ್ಳಿಗಾವಿ, ಸನ್ನತಿ, ಕಮ್ಮಟ್ಟಿಯನ್ನೊಳಗೊಂಡಂತೆ ಒಟ್ಟಾರೆ 20 ಪಾರಂಪರಿಕ ಪ್ರದೇಶಗಳ ಸಮಗ್ರ ಅಭಿವೃದ್ಧಿಯನ್ನು 20 ಕೋಟಿ ರೂಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು. **(ಆಯವ್ಯಯ ಭಾಷಣದ ಕಂಡಿಕ 282)**
5. ಮಳಖೇಡ ಕೋಟೆಯ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿ ಕಾರ್ಯವನ್ನು 5 ಕೋಟಿ ರೂಗಳ ವೆಚ್ಚದಲ್ಲಿ ಕೈಗೊಳ್ಳಲಾಗುವುದು. **(ಆಯವ್ಯಯ ಭಾಷಣದ ಕಂಡಿಕೆ 283)**
6. ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಗೆ ರಾಜ್ಯದಿಂದ ಸೇರ್ಪಡೆಯಾಗಿರುವ 1) ಕಲಬುರುಗಿ, ಬೀದರ್, ವಿಜಯಪುರದಲ್ಲಿರುವ ದಖ್ಖನಿ ಸುಲ್ತಾನರ ವಾಸ್ತುಶಿಲ್ಪ ಸ್ಮಾರಕ ಸಮೂಹಗಳು 2) ಶ್ರೀರಂಗಪಟ್ಟಣ ದ್ವೀಪದಲ್ಲಿನ ಸ್ಮಾರಕ ಸಮೂಹಗಳು. 3) ಬೇಲೂರು ಮತ್ತು ಹಳೇಬೀಡಿನಲ್ಲಿರುವ ಹೊಯ್ಸಳ ವಾಸ್ತುಶಿಲ್ಪ ಸ್ಮಾರಕ ಸಮೂಹಗಳು, ಇವುಗಳನ್ನು ಅಂತಿಮ ಪಟ್ಟಿಗೆ ಸೇರಿಸಲು ಅಗತ್ಯವಿರುವ ಡೋಸಿಯರ್ ಮತ್ತು ವರದಿ ತಯಾರಿಸಿ ಸಲ್ಲಿಸಲು 3 ಕೋಟಿ ರೂಗಳ ಅನುದಾನ ಒದಗಿಸಲಾಗುವುದು. **(ಆಯವ್ಯಯ ಭಾಷಣದ ಕಂಡಿಕೆ 284)**.
7. ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕು, ಸುರಪುರದಲ್ಲಿರುವ ದೇವರದಾಸಿಮಯ್ಯನವರಿಗೆ ಸಂಬಂಧಿಸಿದ ಸ್ಮಾರಕಗಳು, ಪುಷ್ಕರಿಣಿಗಳ ಸಂರಕ್ಷಣಾ ಕಾರ್ಯವನ್ನು 2 ಕೋಟಿ ರೂ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು. **(ಆಯವ್ಯಯ ಭಾಷಣದ ಕಂಡಿಕೆ 285)**.

8. ಬೈಲಹೊಂಗಲದಲ್ಲಿರುವ ಧೀಮಂತ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮನವರ ಸಮಾದಿ ಸ್ಥಳದ ಸಮಗ್ರ ಅಭಿವೃದ್ಧಿ ಕಾರ್ಯವನ್ನು 1 ಕೋಟಿ ರೂ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು. **(ಆಯವ್ಯಯ ಭಾಷಣದ ಕಂಡಿಕೆ 286).**
9. ಶಿವಶರಣ ಬಸವಣ್ಣನವರ ಸಮಕಾಲೀನರಾದ ಹರಳಯ್ಯನವರ ಗದ್ದಿಗೆ ಅಭಿವೃದ್ಧಿ ಮತ್ತು ಸಂರಕ್ಷಣೆ ಕಾರ್ಯವನ್ನು 50 ಲಕ್ಷ ರೂಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು. **(ಆಯವ್ಯಯ ಭಾಷಣದ ಕಂಡಿಕೆ 287)**

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆ.ಇ 464 ವೆಚ್ಚ-7/2015 ದಿನಾಂಕ:10/05/2015ರಲ್ಲಿ ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ:ಯೋಇ/58/ಜಶ/2015 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
G. Annapurna
(ಜಿ.ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಇಲಾಖೆ.
(ಆಡಳಿತ ಕನ್ನಡ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲಕರು, (ಜಿ &ಎಸ್.ಎಸ್. ಎ) ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 560 001.
2. ಪ್ರಧಾನ ಮಹಾಲೇಖಪಾಲಕರು, (ಇ & ಆರ್.ಎಸ್. ಎ) ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 560 001.
3. ಪ್ರಧಾನ ಮಹಾಲೇಖಪಾಲಕರು, (ಎ &ಇ) ಕರ್ನಾಟಕ, ಪಾರ್ಕ್ ಹೌಸ್, ಅಂಚೆ ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು- 560 001.
4. ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರಾಚ್ಯವಸ್ತು ಸುವರ್ಣ ಕರ್ನಾಟಕ ಭವನ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ, ದೊಡ್ಡಕೆರೆ ಮೈದಾನ, ಮೈಸೂರು-10.
5. ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-7&8), ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಸ್ವೀಮರ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ , ವಿಕಾಸ ಸೌಧ, ಬೆಂಗಳೂರು
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಅಹಾಯಕರು, ವಿಕಾಸ ಸೌಧ, ಬೆಂಗಳೂರು.

-1-

## ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
## 2015-16ನೇ ಸಾಲಿನ ಮುಂದುವರೆದ ಯೋಜನೆ ಮತ್ತು ಯೋಜನೇತರ ಅನುದಾನದ ವಿವರಣಾ ಪಟ್ಟಿ

| ಕ್ರ ಸಂ | ಯೋಜನೆಗಳು ಮತ್ತು ಲೆಕ್ಕಶೀರ್ಷಿಕೆ | 2015-16ನೇ ಸಾಲಿನ ಅನುದಾನ ರೂ.ಲಕ್ಷಗಳಲ್ಲಿ) | | ಷರಾ...... | | |
|---|---|---|---|---|---|---|
| | | ಯೋಜನೆ | ಯೋಜನೇತರ | ಲೆಕ್ಕಶೀರ್ಷಿಕೆ | ಯೋಜನೆ ಅನುದಾನ | ಯೋಜನೇತರ ಅನುದಾನ |
| 1 | 2205-00-103-0-01 ವಾಸ್ತ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | 350.00 | 604.00 | 059 - ಇತರೆ ಖರ್ಚು | 248.00 | 300.00 |
| | | | | 200-ನಿರ್ವಹಣೆ | 10.00 | 3.00 |
| | | | | ಆಡಳಿತಾತ್ಮಕ ವೆಚ್ಚಗಳು | 92.00 | 301.00 |
| | | | | ಒಟ್ಟು | 350.00 | 604.00 |
| 2 | 2205-00-103-0-18 ಹಂಪಿ ಅಭಿವೃದ್ಧಿ ಪ್ರಾಧಿಕಾರ | 50.00 | 25.00 | 101-ಸಹಾಯಾನುದಾನ-ಹಂಪಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುದಾನ ನಿಗದಿಪಡಿಸಲಾಗಿದೆ. | | |
| 3 | 2205-00-103-0-21 ಪರಂಪರೆ ಆಯುಕ್ತರು | 1300.00 | 0.00 | ಲೆಕ್ಕಶೀರ್ಷಿಕೆ | ಯೋಜನೆ ಅನುದಾನ | ಯೋಜನೇತರ ಅನುದಾನ |
| | | | | 059 - ಇತರೆ ಖರ್ಚು | 1243.00 | 0.00 |
| | | | | ಆಡಳಿತಾತ್ಮಕ ವೆಚ್ಚಗಳು | 57.00 | 0.00 |
| | | | | ಒಟ್ಟು | 1300.00 | 0.00 |
| 4 | 2205-00-103-0-25 ಸಂಸ್ಕೃತಿ ಸಂಗ್ರಹಾಲಯ | 50.00 | 0.00 | 059 - ಇತರ ಖರ್ಚುಗಳು — ರೂ.50.00ಲಕ್ಷಗಳು | | |
| 5 | 2205-00-107-0-01 ವಸ್ತುಸಂಗ್ರಹಾಲಯಗಳ ಅಭಿವೃದ್ಧಿ | 250.00 | 208.00 | ಲೆಕ್ಕಶೀರ್ಷಿಕೆ | ಯೋಜನೆ ಅನುದಾನ | ಯೋಜನೇತರ ಅನುದಾನ |
| | | | | 059 - ಇತರೆ ಖರ್ಚು | 150.00 | 0.00 |
| | | | | 200 -ನಿರ್ವಹಣೆ | 72.00 | 5.00 |
| | | | | ಆಡಳಿತಾತ್ಮಕ ವೆಚ್ಚಗಳು | 28.00 | 203.00 |
| | | | | ಒಟ್ಟು | 250.00 | 208.00 |
| 6 | 2205-00-107-0-02 ಪ್ರಾಚೀನ ವಸ್ತುಗಳ ಮತ್ತು ಅಪೂರ್ವ ಕಲಾಕೃತಿಗಳ ಅಧಿನಿಯಮ (1972) | 0.00 | 3.00 | ಆಡಳಿತಾತ್ಮಕ ವೆಚ್ಚ-ರೂ.3.00ಲಕ್ಷಗಳು | | |
| 7 | 4202-04-101-0-02 ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳು. | 300.00 | 0.00 | ಬಂಡವಾಳ ವೆಚ್ಚದಡಿ ಕಟ್ಟಡ ನಿರ್ಮಾಣಕ್ಕಾಗಿ 139 - ಪ್ರಧಾನ ಕಾಮಗಾರಿಗಳು ರೂ.300.00ಲಕ್ಷಗಳು | | |
| 8 | 2205-00-102-0-78 059 — ಇತರ ಖರ್ಚು ಸಹ್ಯಾದ್ರಿ ಸಂಸ್ಕೃತಿ ಅಭಿವೃದ್ಧಿ ಪ್ರಾಧಿಕಾರ | 10.00 | 0.00 | ಸಹ್ಯಾದ್ರಿ ಸಂಸ್ಕೃತಿ ಅಭಿವೃದ್ಧಿ ಪ್ರಾಧಿಕಾರ 059- ಇತರ ಖರ್ಚುಗಳು ರೂ.10.00ಲಕ್ಷಗಳು | | |
| | ಒಟ್ಟು | 2310.00 | 840.00 | | | |

G. Annapurna

(ಜಿ.ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಆಡಳಿತ ಕನ್ನಡ

# ಕರ್ನಾಟಕ ಸರ್ಕಾರ

ಸಂಖ್ಯೆ:ಕಸಂವಾ 5609 ಅ.ಕ 2015.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:24/09/2015.

**ಇಂದ:**

ಸರ್ಕಾರದ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

**ಇವರಿಗೆ:**

ಆಯುಕ್ತರು,
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ,
ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ,
ದೊಡ್ಡಕೆರೆ ಮೈದಾನ, ಮೈಸೂರು- 570 010.

ಮಾನ್ಯರೆ,

ವಿಷಯ: 2015-16ನೇ ಸಾಲಿನ ರಾಜ್ಯ ಸರ್ಕಾರದ ಅನುದಾನದಡಿ ಹಾಗೂ ಪಿ.ಡಿ ಅನುದಾನದಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವ ಧರ್ಮೋತ್ಥಾನ ಟ್ರಸ್ಟ್ (ರಿ) ಇವರ ಸಹಯೋಗ ದೊಡನೆ ಕೈಗೊಳ್ಳುವ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:09/09/2015ರಂದು ನಡೆದ ಸಭೆಯ ನಡವಳಿಗಳನ್ನು ಕಾರ್ಯದರ್ಶಿಯವರ ಅನುಮೋದನೆ ಹಾಗೂ ಸಹಿ ಪಡೆದು ಮುಂದಿನ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

G. Annapurna

(ಜಿ.ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ಆಡಳಿತ ಕನ್ನಡ)

ACT(B)
26/09/2015

**2015-16ನೇ ಸಾಲಿನ ರಾಜ್ಯ ಸರ್ಕಾರದ ಅನುದಾನದಡಿ ಹಾಗೂ ಪಿ.ಡಿ ಅನುದಾನದಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ (ರಿ) ಇವರ ಸಹಯೋಗದೊಡನೆ ಕೈಗೊಳ್ಳುವ ಕಾಮಗಾರಿಗಳಿಗೆ**
**<u>ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು</u>**
**ದಿನಾಂಕ 09.09.2015 ರಂದು ಮಧ್ಯಾಹ್ನ 3:00ಗಂಟೆಗೆ**
**ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅವರ ಅಧ್ಯಕ್ಷತೆಯಲ್ಲಿ ನಡೆದ**

# ಸಮಿತಿ ಸಭೆಯ ನಡವಳಿಗಳು

---

ಸಭೆಯಲ್ಲಿ ಉಪಸ್ಥಿತರಿದ್ದವರು:

- ಶ್ರೀ ಬಿ.ಜಿ.ನಂದಕುಮಾರ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ಡಾ॥ ಸಿ.ಜಿ.ಬೆಟಸೂರಮಠ, ಕ.ಆ.ಸೇ. ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
- ಡಾ॥ಬಿ.ಅಶ್ವತ್ಥನಾರಾಯಣ, ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು
- ಡಾ॥ಹೆಚ್.ಎಮ್.ಸಿದ್ಧನಗೌಡರ್, ನಿವೃತ್ತ ನಿರ್ದೇಶಕರು (ವಸ್ತುಸಂಗ್ರಹಾಲಯಗಳು), ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಬೆಂಗಳೂರು.
- ಡಾ॥ಎಸ್.ವಿ.ವೆಂಕಟೇಶಯ್ಯ, ನಿವೃತ್ತ ಪ್ರಾದೇಶಿಕ ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಬೆಂಗಳೂರು.
- ಶ್ರೀ ಪ್ರಭುಸ್ವಾಮಿ ಎಂ. ಸರ್ಕಾರದ ಉಪ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ಶ್ರೀಮತಿ ಬಿ.ಅನ್ನಪೂರ್ಣ, ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ಶ್ರೀ ಸುರೇಂದ್ರ ಕುಮಾರ್ ಹೆಗಡೆ, ಅಧ್ಯಕ್ಷರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ಬೆಂಗಳೂರು.
- ಶ್ರೀ ಹೆಚ್.ಟಿ.ತಳವಾರ್, ನಿರ್ದೇಶಕರು (ವಸ್ತುಸಂಗ್ರಹಾಲಯಗಳು), ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ ಆವರಣ, ಕಸ್ತೂರಬಾ ರಸ್ತೆ, ಬೆಂಗಳೂರು.
- ಡಾ. ಗವಿಸಿದ್ದಯ್ಯ, ನಿರ್ದೇಶಕರು (ಪುರಾತತ್ವ), ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
- ಶ್ರೀ ಹರಿರಾಮ್‌ಶೆಟ್ಟಿ, ನಿರ್ದೇಶಕರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ಬೆಂಗಳೂರು.
- ಶ್ರೀ ಎಸ್.ಕೆ.ವಾಸುದೇವ, ಪುರಾತತ್ವ ಸಂರಕ್ಷಣಾ ಇಂಜಿನಿಯರ್,ಧಾರವಾಡ ಮತ್ತು ಗುಲ್ಬರ್ಗಾ ವಿಭಾಗ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.
- ಶ್ರೀ ಎಂ.ದೊರೆರಾಜು, ಪುರಾತತ್ವ ಸಂರಕ್ಷಣಾ ಇಂಜಿನಿಯರ್, ಮೈಸೂರು ವಿಭಾಗ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
- ಶ್ರೀ ಕೆ.ದೊರೆರಾಜು, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
- ಶ್ರೀ ಜೆ.ಸತೀಶ್, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
- ಶ್ರೀ ಕೆ.ಎಂ.ಕುಬೇರಪ್ಪ, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.
- ಶ್ರೀಮತಿ ಬಿ.ಎಂ.ಪ್ರೇಮಲತಾ, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.
- ಶ್ರೀಮತಿ ಸುವರ್ಣ ಕ್ಷೀರಸಾಗರ, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.

ಸಭೆಯಲ್ಲಿ ಈ ಕೆಳಕಾಣಿಸಿದ ವಿಷಯಗಳನ್ನು ಚರ್ಚಿಸಲಾಯಿತು:

ಸಭೆಯ ಆರಂಭದಲ್ಲಿ ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರು ಸಭೆಯಲ್ಲಿ ಭಾಗವಹಿಸಿದ್ದ ಸರ್ಕಾರದ ಕಾರ್ಯದರ್ಶಿಯವರನ್ನು ತಾಂತ್ರಿಕ ಸಮಿತಿ ಸದಸ್ಯರನ್ನು ಮತ್ತು ಇಲಾಖೆಯ ಅಧಿಕಾರಿ/ಸಿಬ್ಬಂದಿಗಳನ್ನು ಸಭೆಗೆ ಸ್ವಾಗತಿಸುತ್ತಾ, 2015-16ನೇ ಸಾಲಿನಲ್ಲಿ ಇಲಾಖೆಯ ವತಿಯಿಂದ ಕೈಗೊಳ್ಳಲಾಗುವ ಎಲ್ಲಾ ರೀತಿಯ ಸಂರಕ್ಷಣಾ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ ವಿವರಗಳನ್ನು ನೀಡಿದರು.

ಅ) ರಾಜ್ಯ ಯೋಜನೆಯಡಿ ಒಟ್ಟು 24 ಕಾಮಗಾರಿಗಳು

ಆ) ಪಿ.ಡಿ. ಖಾತೆಯಡಿ 1 ಕಾಮಗಾರಿ

ಇ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ 12ನೇ ಹಂತದ ಕ್ರಿಯಾಯೋಜನೆಗೆ ಅನುಮೋದನೆ ಹಾಗೂ ಕ್ರಿಯಾಯೋಜನೆಯಲ್ಲಿನ 13 ಕಾಮಗಾರಿಗಳ ಅಂದಾಜುಪಟ್ಟಿಗೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ. ಹಾಗೂ 1 ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ.

ಈ ಸಂಬಂಧ ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಈ ಕಾಮಗಾರಿಗಳ ಅಂದಾಜು ಪಟ್ಟಿಯು ಸ್ವೀಕೃತವಾಗಿದ್ದು, ಈ ಅಂದಾಜುಪಟ್ಟಿಗಳ ಪರಿಶೀಲನೆ ಹಾಗೂ ಕಾಮಗಾರಿಗಳ ಸ್ಥಳ ಪರಿಶೀಲನೆಯನ್ನು ಕೈಗೊಳ್ಳಲಾಗಿರುತ್ತದೆ ಎಂಬುದಾಗಿ ಸಭೆಯ ಗಮನಕ್ಕೆ ತಂದರು.

**ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಈ ಕೆಳಕಂಡ ಸಲಹೆ ಸೂಚನೆಗಳನ್ನು ನೀಡಿದರು:**

- ಸಂರಕ್ಷಣೆಗಾಗಿ ತೆಗೆದುಕೊಳ್ಳುವ ಸ್ಮಾರಕಗಳಿಗೆ ಸಂಬಂಧಿಸಿದ ಹಾಗೆ ಎಲ್ಲಾ ದಿಕ್ಕಿನಲ್ಲಿ ಒಳ ಹಾಗೂ ಹೊರಭಾಗದ ಹೆಚ್ಚಿನ ಛಾಯಾಚಿತ್ರಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಬೇಕು. ಸ್ಮಾರಕದ ಪ್ಲಾನ್, ಮುಂಭಾಗದ ನಕ್ಷೆ, ಹಾಗೂ ಸೆಕ್ಷನ್ ನಕ್ಷೆ (Plan, Section, Front Elevation, Scaled drawings)ಗಳನ್ನು ಕಡ್ಡಾಯವಾಗಿ ಅಳವಡಿಸಬೇಕು.

- ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಾಗಿ ಸ್ಮಾರಕದ ಮೂಲ ಭಾಗಗಳನ್ನು ಸಂರಕ್ಷಣೆಗೆ ಉಪಯೋಗಿಸತಕ್ಕದ್ದು. ಕಡಿಮೆ ಬಿದ್ದಲ್ಲಿ ಹೊಸದಾಗಿ ತಯಾರಿಸಿ ಅಳವಡಿಸಬೇಕು.

- ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು ಸ್ಮಾರಕಗಳಲ್ಲಿ ಆಗಿರುವ ಅನಧಿಕೃತ ಒತ್ತುವರಿಯನ್ನು ತೆಗೆದುಹಾಕಿ ಬೇಲಿಗಳನ್ನು ಹಾಕುವ ಕ್ರಮ ಕೈಗೊಳ್ಳಬೇಕು.

- ಸಂರಕ್ಷಣಾ ಕಾಮಗಾರಿಯ ಟಿಪ್ಪಣಿಯು (Conservation Note) ಅವಶ್ಯಕವಾದುದು.

- ನಕ್ಷೆಯಲ್ಲಿ ಕಾಮಗಾರಿಯನ್ನು ಕೈಗೊಳ್ಳುವ ನಿಖರವಾದ ಅಳತೆಯನ್ನು (Sketch to Scale) ನಮೂದಿಸಬೇಕು.

- ತಾಂತ್ರಿಕ ಸಲಹಾ ಸಮಿತಿ ಸದಸ್ಯರು ನೀಡಿರುವ ಸಲಹೆ ಸೂಚನೆಗಳನ್ನು ಅಂದಾಜುಪಟ್ಟಿಗಳಲ್ಲಿ ಅಳವಡಿಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳುವ ಷರತ್ತಿಗೊಳಪಟ್ಟು ಈ ಕೆಳಕಂಡ ಸಂರಕ್ಷಣಾ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಸಮಿತಿಯು ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡಿತು.

**ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ 2015-16ನೇ ಸಾಲಿನ 12ನೇ ಹಂತದ ಕ್ರಿಯಾಯೋಜನೆಯಲ್ಲಿನ ಕಾಮಗಾರಿಗಳ ವಿವರ.**

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್(ರಿ)ನ ನಿರ್ದೇಶಕರು ಕರ್ನಾಟಕ ಸರ್ಕಾರದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಹಭಾಗಿತ್ವದೊಂದಿಗೆ ಟ್ರಸ್ಟ್‌ನ ವತಿಯಿಂದ 2002-03ನೇ ಸಾಲಿನಿಂದಲೂ ಸರ್ಕಾರದ ಶೇಕಡ 40%ರಷ್ಟು ಅನುದಾನ, ಟ್ರಸ್ಟ್ ವತಿಯಿಂದ ಶೇಕಡ 40%ರಷ್ಟು ಅನುದಾನ ಹಾಗೂ ಸ್ಥಳೀಯರಿಂದ ಶೇಕಡ 20%ರಷ್ಟು ಅನುದಾನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 138 ಪುರಾತನ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಗಳಲ್ಲಿ ಇದುವರೆವಿಗೆ ಒಟ್ಟು 124 ಸ್ಮಾರಕಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿಕೆ 14 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಈ ಕಾಮಗಾರಿಯಗಳು ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದೆಂಬುದಾಗಿ ತಿಳಿಸಿದರು.

ಪ್ರಸ್ತುತ 2015-16ನೇ ಸಾಲಿನ 12ನೇ ಹಂತದ ಕ್ರಿಯಾಯೋಜನೆಯಲ್ಲಿ ಒಟ್ಟು 14 ಕಾಮಗಾರಿಗಳನ್ನು ತೆಗೆದುಕೊಳ್ಳಲು ಆಯ್ಕೆ ಮಾಡಿಕೊಂಡಿದ್ದು, ಈ ಕಾಮಗಾರಿಗಳ ಕ್ರಿಯಾಯೋಜನೆ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಹಾಗೂ ಕಾಮಗಾರಿಗಳ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿ ತಾಂತ್ರಿಕ ಸಲಹಾ ಸಮಿತಿ ಸದಸ್ಯರ ಅವಗಾಹನೆಗೆ ಈಗಾಗಲೇ ಸಲ್ಲಿಸಲಾಗಿದೆ. ಈ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ಹಾಗೂ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ನೀಡಬೇಕೆಂದು ಕೋರಿದರು.

ತಾಂತ್ರಿಕ ಸಲಹಾ ಸಮಿತಿಯು ಅಂದಾಜು ಪಟ್ಟಿಗಳನ್ನು ಪರಿಶೀಲಿಸಿ, ಕೆಳಕಂಡ 14 ಕಾಮಗಾರಿಗಳ ಅಂದಾಜುಪಟ್ಟಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಿತು.

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| 1 | ಶ್ರೀ ಈಶ್ವರ ದೇವಸ್ಥಾನ, ದಂದೂರು, ತರೀಕೆರೆ ತಾಲ್ಲೂಕು | 15.00 |
| 2 | ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನ, ಸಿದ್ಧೇಶ್ವರದುರ್ಗ, ಚಳ್ಳಕೆರೆ ತಾಲ್ಲೂಕು | 28.00 |
| 3 | ಶ್ರೀ ಅನಂತನಾಥಸ್ವಾಮಿ ಬಸದಿ, ಸಿದ್ಧಕಟ್ಟೆ, ಬಂಟ್ವಾಳ ತಾಲ್ಲೂಕು | 15.00 |
| 4 | ಶ್ರೀ ಈಶ್ವರ ದೇವಸ್ಥಾನ, ಹೆಬ್ಬಾಳೆ, ಅರಕಲಗೂಡು ತಾಲ್ಲೂಕು | 23.00 |
| 5 | ಶ್ರೀ ಪರವಾಸುದೇವರ ದೇವಸ್ಥಾನ, ಗೊರೂರು, ಅರಕಲಗೂಡು ತಾಲ್ಲೂಕು | 38.00 |
| 6 | ಶ್ರೀ ರಾಮೇಶ್ವರ ದೇವಸ್ಥಾನ, ರಾಮನಾಥಪುರ, ಅರಕಲಗೂಡು ತಾಲ್ಲೂಕು | 36.00 |
| 7 | ಶ್ರೀ ಲಕ್ಷ್ಮೀಕಾಂತ ದೇವಸ್ಥಾನ, ಮುದುಡಿ, ಅರಸೀಕೆರೆ ತಾಲ್ಲೂಕು | 45.00 |
| 8 | ಶ್ರೀ ಕಲ್ಲೇಶ್ವರ ದೇವಸ್ಥಾನ, ಕಣಕಟ್ಟೆ, ಅರಸೀಕೆರೆ ತಾಲ್ಲೂಕು | 27.00 |
| 9 | ಶ್ರೀ ಕಲ್ಲೇಶ್ವರ ದೇವಸ್ಥಾನ, ಮೈದೂರ, ರಾಣೆಬೆನ್ನೂರು ತಾಲ್ಲೂಕು | 24.00 |
| 10 | ಶ್ರೀ ಮಲ್ಲೇಶ್ವರ ದೇವಸ್ಥಾನ, ಅಟ್ಟುಪ್ಪೆ, ಕೆ.ಆರ್.ಪೇಟೆ ತಾಲ್ಲೂಕು | 40.00 |
| 11 | ಶ್ರೀ ವೀರಭದ್ರ ದೇವಸ್ಥಾನ, ಬಸವಾಪುರ, ಹೊಸನಗರ ತಾಲ್ಲೂಕು | 32.00 |
| 12 | ಶ್ರೀ ಚೆನ್ನಕೇಶವ ದೇವಸ್ಥಾನ, ನಾರಾಯಣಕೆರೆ, ತುಮಕೂರು ತಾಲ್ಲೂಕು | 30.00 |
| 13 | ಶ್ರೀ ಈಶ್ವರ ದೇವಸ್ಥಾನ, ನಂದಿಕಟ್ಟೆ, ಮುಂಡಗೋಡ ತಾಲ್ಲೂಕು | 32.00 |
| 14 | ಶ್ರೀ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ತೇರಹಳ್ಳಿ, ಕೊಂಡರಾಜನಪಳ್ಳಿ ಪಂಚಾಯ್ತಿ, ಕೋಲಾರ ತಾಲ್ಲೂಕು. | 45.00 |

**ಶ್ರೀ ಸೌಮ್ಯಸೋಮೇಶ್ವರ ದೇವಾಲಯ ಸಂರಕ್ಷಣೆಯ ಅಂದಾಜುಪಟ್ಟಿಯ ತಾಂತ್ರಿಕ ಅನುಮೋದನೆ :**

ಸರ್ಕಾರಿ ಆದೇಶ ಸಂಖ್ಯೆ:ಕಸಂವಾ/63/ಕೆಎಂಯು/2014, ದಿನಾಂಕ 09.09.2014, ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ನಿಂಬಾಪುರ ಗ್ರಾಮದಲ್ಲಿರುವ ಶ್ರೀ ಸೌಮ್ಯಸೋಮೇಶ್ವರ ದೇವಾಲಯ ಸಂರಕ್ಷಣೆಯನ್ನು ಮೆ: ಜೆ.ಎಸ್.ಡಬ್ಲ್ಯೂ ಫೌಂಡೇಷನ್, ಮುಂಬೈ, ಇವರ ಸ್ವಂತ ವೆಚ್ಚದಲ್ಲಿ ಕೈಗೊಳ್ಳಲು ಅನುಬಂಧ-2ರಲ್ಲಿನ ನಿಭಂದನೆಗಳನ್ನು ಪಾಲಿಸುವ ಷರತ್ತುಗೊಳಪಟ್ಟು ಅನುಮತಿಯನ್ನು ನೀಡಲಾಗಿತ್ತು.

ಈ ಆದೇಶದನ್ವಯ ದಿನಾಂಕ 30.10.2014ರಂದು ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜೆ.ಎಸ್.ಡಬ್ಲ್ಯೂ ಫೌಂಡೇಶನ್ ಸಂಸ್ಥೆಯು ಒಡಂಬಡಿಕೆಗೆ ಸಹಿ ಮಾಡಲಾಗಿದ್ದು, ಒಡಂಬಡಿಕೆಯ ನಿಬಂಧನೆಯ ಕ್ರಮ ಸಂಖ್ಯೆ (2)ರನ್ವಯ ಸಂರಕ್ಷಣಾ ಕಾಮಗಾರಿಯನ್ನು ನಿರ್ವಹಿಸಿ ಅನುಭವವಿರುವ ಸಂಸ್ಥೆಯಾದ ಶ್ರೀ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ ಕೈಗೊಳ್ಳಲು ತಾಂತ್ರಿಕ ಸಲಹಾ ಸಮಿತಿಯ ತಾಂತ್ರಿಕ ಅನುಮೋದನೆಗಾಗಿ ಮಂಡಿಸಲಾಗಿದ್ದು, ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ನೀಡಲಾಯಿತು.

ರಾಜ್ಯ ಯೋಜನೆಯಡಿಯಲ್ಲಿನ ಕಾಮಗಾರಿಗಳು

| | **ಲೆಕ್ಕಶೀರ್ಷಿಕೆ: 2205-00-103-0-01 (ಯೋಜನೆ)** | |
|---|---|---|
| 1 | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ದೊಡ್ಡಿಂದವಾಡಿ ಗ್ರಾಮದ ಶ್ರೀ ನಂಜುಂಡೇಶ್ವರ ದೇವಸ್ಥಾನ ಸಂರಕ್ಷಣಾ ಕೆಲಸ. | 53.00 |
| 2 | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಬಂಡಳ್ಳಿ ಗ್ರಾಮದ ಶ್ರೀ ಚೆನ್ನಿಗರಾಯಸ್ವಾಮಿ ದೇವಸ್ಥಾನ ಸಂರಕ್ಷಣಾ ಕೆಲಸ. | 41.00 |

| | | |
|---|---|---|
| 3 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಗುಂಗ್ರಾಲ್ ಛತ್ರದ ಈಶ್ವರ ದೇವಸ್ಥಾನದ 2ನೇ ಹಂತದ ಕಾಮಗಾರಿ. | 50.00 |
| 4 | ಮಂಡ್ಯ ಜಿಲ್ಲೆ ಕೆ.ಆರ್ ಪೇಟೆ ತಾಲ್ಲೂಕು ಸಿಂಧಘಟ್ಟ ಶ್ರೀ ಮಾರಮ್ಮ ದೇವಾಲಯದ ಸಂರಕ್ಷಣೆ. | 39.00 |
| | **ಲೆಕ್ಕಶೀರ್ಷಿಕೆ:2205-00-103-0-21 (ಯೋಜನೆ)** | |
| 5 | ಮೈಸೂರು ಜಿಲ್ಲೆ, ಅರಮನೆ ಆವರಣದಲ್ಲಿರುವ ಶ್ರೀ ಶ್ವೇತವರಹಾ ಸ್ವಾಮಿ ದೇವಾಲಯದಲ್ಲಿನ ಪಾರಂಪರಿಕ ಗೋಡೆ ಚಿತ್ರದ ಸಂರಕ್ಷಣೆ ಕಾಮಗಾರಿ (Mural Paintings) | 23.00 |
| 6 | ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕು, ದೇಗುಲಹಳ್ಳಿಯಲ್ಲಿರುವ ಶ್ರೀ ಈಶ್ವರ ದೇವಾಲಯ ಸಂರಕ್ಷಣಾ ಕಾಮಗಾರಿ. | 20.50 |
| 7 | ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲ್ಲೂಕು, ನೀರಲಗಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ (ಸಿದ್ಧರಾಮೇಶ್ವರ) ದೇವಾಲಯದ ಸಂರಕ್ಷಣಾ ಕಾಮಗಾರಿ. (ಕಾಂಪೌಂಡ್ ಗೋಡೆ). | 9.00 |
| 8 | ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ನಗರದಲ್ಲಿರುವ ನೂರ್‌ಬಾಗ್ (3 ಸಂಖ್ಯೆ) ಗುಂಬಜ್‌ಗಳ ಸಂರಕ್ಷಣಾ ಕಾಮಗಾರಿ. | 29.00 |
| 9 | ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕು, ಮುದನೂರ್ ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಾಲಯದ ಸಂರಕ್ಷಣಾ ಕಾಮಗಾರಿ. | 80.00 |
| 10 | ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಮಳಖೇಡದಲ್ಲಿಲರುವ ಕೋಟೆಯ ಸಂರಕ್ಷಣಾ ಕಾಮಗಾರಿ. | 480.00 |
| | **ಲೆಕ್ಕ ಶೀರ್ಷಿಕೆ: 2205-00-107-0-01 (ಯೋಜನೆ) 059 ಇತರೆ ಖರ್ಚು** | |
| 11 | ಮೈಸೂರು ನಗರ ವೆಲ್ಲಿಂಗ್‌ಟನ್ ವಸ್ತುಸಂಗ್ರಹಾಲಯದ ಉದ್ಯಾನವನ ನಿರ್ಮಾಣ ಮತ್ತು ಅಭಿವೃದ್ಧಿ ಕೆಲಸ. | 10.00 |
| 12 | ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಚಾಮರಾಜೇಂದ್ರ ಸ್ಮರಣಾರ್ಥ ಸರ್ಕಾರಿ ವಸ್ತುಸಂಗ್ರಹಾಲಯದ ಕಟ್ಟಡ ನಿರ್ಮಾಣ ಮತ್ತು ಅಭಿವೃದ್ಧಿ ಕೆಲಸ. | 20.00 |
| 13 | ಮಡಿಕೇರಿ ಜಿಲ್ಲೆ, ಮಡಿಕೇರಿಯಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ ಕೆಲಸ. | 12.00 |
| 14 | ಮಂಗಳೂರು ಜಿಲ್ಲೆ ಬಿಜೈನಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ ಕಾಮಗಾರಿ ಹಾಗೂ ಉದ್ಯಾನವನದ ನಿರ್ಮಾಣದ ನಿರ್ವಹಣೆ. | 42.00 |
| 15 | ಗದಗ ಜಿಲ್ಲೆ, ಗದಗ ತಾಲ್ಲೂಕು, ಗದಗದಲ್ಲಿರುವ ವಸ್ತುಸಂಗ್ರಹಾಲಯದ ಉದ್ಯಾನವನದ ನಿರ್ವಹಣೆ ಕಾಮಗಾರಿ. | 07.00 |
| 16 | ಬೀದರ ಜಿಲ್ಲೆ, ಬಸವಕಲ್ಯಾಣ ಸರ್ಕಾರಿ ವಸ್ತುಸಂಗ್ರಹಾಲಯದ ವಾರ್ಷಿಕ ನಿರ್ವಹಣೆ ಹಾಗೂ ಅಭಿವೃದ್ಧಿ ಸಂರಕ್ಷಣಾ ಕಾಮಗಾರಿ. | 10.50 |
| 17 | ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ನಗರದಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಉದ್ಯಾನವನ ನಿರ್ವಹಣೆ ಹಾಗೂ ಅಭಿವೃದ್ಧಿ ಸಂರಕ್ಷಣಾ ಕಾಮಗಾರಿ. | 07.00 |
| 18 | ಬೆಂಗಳೂರು ಕಸ್ತೂರಿ ಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದ ಪೂರಕ ಕಟ್ಟಡದ ಮೊದಲ ಮಹಡಿಯಲ್ಲಿ ಪುರಾತತ್ವ ಸಂಗ್ರಹಗಳ ಕೊಠಡಿ ಅಭಿವೃದ್ಧಿ | 33.50 |
| 19 | ಶಿವಮೊಗ್ಗ ಜಿಲ್ಲೆ ಶಿವಪ್ಪನಾಯಕನ ಅರಮನೆ ಹಿಂಭಾಗದ ಕಟ್ಟಡದ ಅಭಿವೃದ್ಧಿ ಕಾಮಗಾರಿ | 24.00 |
| | **ಲೆಕ್ಕಶೀರ್ಷಿಕೆ: 2205-00-107-0-01 (ಯೋಜನೆ) 200 ನಿರ್ವಹಣೆ** | |
| 20 | ಮೈಸೂರಿನ ಕೇಂದ್ರ ಕಛೇರಿಯ ಕಲಾ ಗ್ಯಾಲರಿಗೆ ಎಲ್.ಇ.ಡಿ. ಲೈಟ್‌ಗಳು ಮತ್ತು ವಿದ್ಯುಚ್ಛಕ್ತಿ ಹಾಗೂ ಹವಾನಿಯಂತ್ರಣ ಅಳವಡಿಸುವ ಕೆಲಸ. | 27.50 |
| 21 | ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿ ವೆಂಕಟಪ್ಪ ಚಿತ್ರಶಾಲೆಯ ಆವರಣದಲ್ಲಿನ ಉದ್ಯಾನವನ ನಿರ್ವಹಣೆ | 15.00 |
| 22 | ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿ ಸರ್ಕಾರಿ ವಸ್ತುಸಂಗ್ರಹಾಲಯದ ಆವರಣದ ಸುತ್ತಲೂ ಡಾಂಬರೀಕರಣ ಕೆಲಸ | 30.00 |
| 23 | ಬಳ್ಳಾರಿ ಜಿಲ್ಲೆ, ಹೂವಿನ ಹಡಗಲಿ ತಾಲ್ಲೂಕಿನಲ್ಲಿರುವ ಹೂವಿನಹಡಗಲಿ ಸರ್ಕಾರಿ ವಸ್ತುಸಂಗ್ರಹಾಲಯದ ಉದ್ಯಾನವನ ನಿರ್ವಹಣೆ ಕಾಮಗಾರಿ ಕೆಲಸ | 8.50 |
| | **ಲೆಕ್ಕಶೀರ್ಷಿಕೆ: 2205-00-103-0-25 (ಯೋಜನೆ)** | |
| 24 | ಧಾರವಾಡದಲ್ಲಿರುವ ಪಾರಂಪರಿಕ ಲಿಂಗಾಯತ ಭವನದ ಸಂರಕ್ಷಣಾ ಕಾಮಗಾರಿ. | 130.00 |

ಕ್ರಮ ಸಂಖ್ಯೆ-5ರ ಮೈಸೂರು ಜಿಲ್ಲೆ, ಅರಮನೆ ಆವರಣದಲ್ಲಿರುವ ಶ್ರೀ ಶ್ವೇತವರಹಾ ಸ್ವಾಮಿ ದೇವಾಲಯದಲ್ಲಿನ ಪಾರಂಪರಿಕ ಗೋಡೆ ಚಿತ್ರದ (Mural Paintings) ಸಂರಕ್ಷಣೆ ಕಾಮಗಾರಿಯನ್ನು ಮೆ:ರೀಜನಲ್ ಕನ್ಸರ್‌ವೇಷನ್ ಲ್ಯಾಬೊರೇಟರಿ, ಸಿದ್ಧಾರ್ಥನಗರ, ಮೈಸೂರು ಇವರ ಮುಖಾಂತರ ಕೈಗೊಳ್ಳಲು ಅನುಮತಿಯನ್ನು ನೀಡಿತು.

ಪಿ.ಡಿ.ಖಾತೆಯಡಿ

| | | |
|---|---|---|
| 25 | ಮೈಸೂರು ನಗರದ ಸಂತ ಫಿಲೋಮಿನ ಚರ್ಚ್‌ನ ಸಂರಕ್ಷಣಾ ಕೆಲಸ. | 270.00 |

ಈ ಕಾಮಗಾರಿಗೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂಖ್ಯೆ:ಪ್ರಇ/09/ಪ್ರ.ವಾ.ಯೋ/2015, ಬೆಂಗಳೂರು ದಿನಾಂಕ:21.01.2015ರ ಆದೇಶದಲ್ಲಿ ಮೈಸೂರು ನಗರದ ಸೆಂಟ್ ಫಿಲೋಮಿನಾ ಚರ್ಚ್ ದುರಸ್ಥಿಗೊಳಿಸುವ ಕಾಮಗಾರಿಯನ್ನು ಕೈಗೊಳ್ಳಲು ರೂ.270.00ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ರೂ.120.00ಲಕ್ಷಗಳ ಅನುದಾನವನ್ನು ಈ ಇಲಾಖೆಗೆ ಬಿಡುಗಡೆ ಮಾಡಿರುತ್ತಾರೆ. ಈ ಕಾಮಗಾರಿಗೆ ಸಿದ್ಧಪಡಿಸಿರುವ ರೂ.270.00ಲಕ್ಷಗಳ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಯಿತು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಅಧ್ಯಕ್ಷರು, ಸದಸ್ಯರುಗಳು ಹಾಗೂ ಎಲ್ಲಾ ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

( ಡಾ||ಸಿ.ಜಿ.ಬೆಟಸೂರಮಠ, ಕ.ಆ.ಸೇ.)
ಆಯುಕ್ತರು,
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು
ಇಲಾಖೆಯ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿ
ಸದಸ್ಯರು

(ಬಿ.ಜಿ.ನಂದಕುಮಾರ್, ಭಾ.ಆ.ಸೇ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆಯ ತಾಂತ್ರಿಕ ಮತ್ತು ಆಡಳಿತಾತ್ಮಕ
ಮಂಜೂರಾತಿ ಸಮಿತಿ ಅಧ್ಯಕ್ಷರು

(ಡಾ||ಜಿ.ಅಶ್ವತ್ಥನಾರಾಯಣ)
ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು,
ಲೋಕೋಪಯೋಗಿ ಇಲಾಖೆ ಹಾಗೂ ಪುರಾತತ್ವ
ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ತಾಂತ್ರಿಕ
ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿಯ ಅಧಿಕಾರೇತರ
ಸಮಿತಿ ಸದಸ್ಯರು

(ಡಾ||ಹೆಚ್.ಎಂ.ಸಿದ್ಧನಗೌಡರ್)
ನಿವೃತ್ತ ನಿರ್ದೇಶಕರು (ವಸ್ತುಸಂಗ್ರಹಾಲಯಗಳು) ಹಾಗೂ
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ
ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿಯ
ಅಧಿಕಾರೇತರ ಸಮಿತಿ ಸದಸ್ಯರು

(ಡಾ||ಎಸ್.ವಿ.ವೆಂಕಟೇಶಯ್ಯ)
ನಿವೃತ್ತ ಪ್ರಾಂತೀಯ ನಿರ್ದೇಶಕರು
ಭಾರತೀಯ ಪುರಾತತ್ವ ಸರ್ವೇಕ್ಷಣೆ ಹಾಗೂ
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿಯ
ಅಧಿಕಾರೇತರ ಸಮಿತಿ ಸದಸ್ಯರು

(೩)

# ಕರ್ನಾಟಕ ಸರ್ಕಾರ

ಸಂಖ್ಯೆ:ಕಸಂಪಾ 5609 ಅ.ಕ 2015.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:24/09/2015.

**ಇಂದ:**

ಸರ್ಕಾರದ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

**ಇವರಿಗೆ:**

ಆಯುಕ್ತರು,
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ,
ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ,
ದೊಡ್ಡಕೆರೆ ಮೈದಾನ, ಮೈಸೂರು- 570 010.

ಮಾನ್ಯರೆ,

ವಿಷಯ: 2015-16ನೇ ಸಾಲಿನ ರಾಜ್ಯ ಸರ್ಕಾರದ ಅನುದಾನದಡಿ ಹಾಗೂ ಪಿ.ಡಿ ಅನುದಾನದಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವ ಧರ್ಮೋತ್ಥಾನ ಟ್ರಸ್ಟ್ (ರಿ) ಇವರ ಸಹಯೋಗ ದೊಡನೆ ಕೈಗೊಳ್ಳುವ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:09/09/2015ರಂದು ನಡೆದ ಸಭೆಯ ನಡವಳಿಗಳನ್ನು ಕಾರ್ಯದರ್ಶಿಯವರ ಅನುಮೋದನೆ ಹಾಗೂ ಸಹಿ ಪಡೆದು ಮುಂದಿನ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,
G. Annapurna
(ಜಿ.ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ,
(ಆಡಳಿತ ಕನ್ನಡ)

ACT1(A)
28/09/2015

**2015-16ನೇ ಸಾಲಿನ ರಾಜ್ಯ ಸರ್ಕಾರದ ಅನುದಾನದಡಿ ಹಾಗೂ ಪಿ.ಡಿ ಅನುದಾನದಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ (ರಿ) ಇವರ ಸಹಯೋಗದೊಡನೆ ಕೈಗೊಳ್ಳುವ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು**

**ದಿನಾಂಕ 09.09.2015 ರಂದು ಮಧ್ಯಾಹ್ನ 3:00ಗಂಟೆಗೆ ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅವರ ಅಧ್ಯಕ್ಷತೆಯಲ್ಲಿ ನಡೆದ**

# ಸಮಿತಿ ಸಭೆಯ ನಡವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದವರು:

- ಶ್ರೀ ಬಿ.ಜಿ.ನಂದಕುಮಾರ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ಡಾ|| ಸಿ.ಜಿ.ಬೆಟಸೂರಮಠ, ಕ.ಆ.ಸೇ. ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
- ಡಾ||ಜಿ.ಅಶ್ವತ್ಥನಾರಾಯಣ, ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು
- ಡಾ||ಹೆಚ್.ಎಮ್.ಸಿದ್ಧನಗೌಡರ್, ನಿವೃತ್ತ ನಿರ್ದೇಶಕರು (ವಸ್ತುಸಂಗ್ರಹಾಲಯಗಳು), ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಬೆಂಗಳೂರು.
- ಡಾ||ಎಸ್.ವಿ.ವೆಂಕಟೇಶಯ್ಯ, ನಿವೃತ್ತ ಪ್ರಾದೇಶಿಕ ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಬೆಂಗಳೂರು.
- ಶ್ರೀ ಪ್ರಭುಸ್ವಾಮಿ ಎಂ. ಸರ್ಕಾರದ ಉಪ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ಶ್ರೀಮತಿ ಜಿ.ಅನ್ನಪೂರ್ಣ, ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
- ಶ್ರೀ ಸುರೇಂದ್ರ ಕುಮಾರ್ ಹೆಗಡೆ, ಅಧ್ಯಕ್ಷರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ಬೆಂಗಳೂರು.
- ಶ್ರೀ ಹೆಚ್.ಟಿ.ತಳವಾರ್, ನಿರ್ದೇಶಕರು (ವಸ್ತುಸಂಗ್ರಹಾಲಯಗಳು), ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ವೆಂಕಟಪ್ಪ ಚಿತ್ರಶಾಲೆ ಆವರಣ, ಕಸ್ತೂರಬಾ ರಸ್ತೆ, ಬೆಂಗಳೂರು.
- ಡಾ. ಗವಿಸಿದ್ದಯ್ಯ, ನಿರ್ದೇಶಕರು (ಪುರಾತತ್ವ), ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
- ಶ್ರೀ ಹರಿರಾಮ್‌ಶೆಟ್ಟಿ, ನಿರ್ದೇಶಕರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ಬೆಂಗಳೂರು.
- ಶ್ರೀ ಎಸ್.ಕೆ.ವಾಸುದೇವ, ಪುರಾತತ್ವ ಸಂರಕ್ಷಣಾ ಇಂಜಿನಿಯರ್.ಧಾರವಾಡ ಮತ್ತು ಗುಲ್ಬರ್ಗಾ ವಿಭಾಗ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.
- ಶ್ರೀ ಎಂ.ದೊರೆರಾಜು, ಪುರಾತತ್ವ ಸಂರಕ್ಷಣಾ ಇಂಜಿನಿಯರ್, ಮೈಸೂರು ವಿಭಾಗ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
- ಶ್ರೀ ಕೆ.ದೊರೆರಾಜು, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
- ಶ್ರೀ ಜೆ.ಸತೀಶ್, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.
- ಶ್ರೀ ಕೆ.ಎಂ.ಕುಬೇರಪ್ಪ, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.
- ಶ್ರೀಮತಿ ಟಿ.ಎಂ.ಪ್ರೇಮಲತಾ, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.
- ಶ್ರೀಮತಿ ಸುವರ್ಣ ಕ್ಷೀರಸಾಗರ, ಪುರಾತತ್ವ ಸಂರಕ್ಷಣಾ ಸಹಾಯಕರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಧಾರವಾಡ.

ಸಭೆಯಲ್ಲಿ ಈ ಕೆಳಕಾಣಿಸಿದ ವಿಷಯಗಳನ್ನು ಚರ್ಚಿಸಲಾಯಿತು:

ಸಭೆಯ ಆರಂಭದಲ್ಲಿ ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರು ಸಭೆಯ ಭಾಗವಹಿಸಿದ್ದ ಸರ್ಕಾರದ ಕಾರ್ಯದರ್ಶಿಯವರನ್ನು ತಾಂತ್ರಿಕ ಸಮಿತಿ ಸದಸ್ಯರನ್ನು ಮತ್ತು ಇಲಾಖೆ ಅಧಿಕಾರಿ/ಸಿಬ್ಬಂದಿಗಳನ್ನು ಸಭೆಗೆ ಸ್ವಾಗತಿಸುತ್ತಾ, 2015-16ನೇ ಸಾಲಿನಲ್ಲಿ ಇಲಾಖೆಯ ವತಿಯಿಂದ ಕೈಗೊಳ್ಳಲಾಗುವ ರೀತಿಯ ಸಂರಕ್ಷಣಾ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ವಿವರಗಳನ್ನು ನೀಡಿದರು.

ಅ) ರಾಜ್ಯ ಯೋಜನೆಯಡಿ ಒಟ್ಟು 24 ಕಾಮಗಾರಿಗಳು

ಆ) ಪಿ.ಡಿ. ಖಾತೆಯಡಿ 1 ಕಾಮಗಾರಿ

ಇ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ 12ನೇ ಹಂತದ ಕ್ರಿಯಾಯೋಜನೆ ಅನುಮೋದನೆ ಹಾಗೂ ಕ್ರಿಯಾಯೋಜನೆಯಲ್ಲಿನ 13 ಕಾಮಗಾರಿಗಳ ಅಂದಾಜುಪಟ್ಟಿಗೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ. ಹಾಗೂ 1 ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ.

ಈ ಸಂಬಂಧ ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಈ ಕಾಮಗಾರಿಗಳ ಅಂದಾಜು ಪಟ್ಟಿಯು ಸ್ವೀಕೃತವಾಗಿದ್ದು, ಅಂದಾಜುಪಟ್ಟಿಗಳ ಪರಿಶೀಲನೆ ಹಾಗೂ ಕಾಮಗಾರಿಗಳ ಸ್ಥಳ ಪರಿಶೀಲನೆಯನ್ನು ಕೈಗೊಳ್ಳಲಾಗಿರುತ್ತದೆ ಎಂಬುದಾಗಿ ಸಭೆ ಗಮನಕ್ಕೆ ತಂದರು.

**ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಈ ಕೆಳಕಂಡ ಸಲಹೆ ಸೂಚನೆಗಳನ್ನು ನೀಡಿದರು:**

- ಸಂರಕ್ಷಣೆಗಾಗಿ ತೆಗೆದುಕೊಳ್ಳುವ ಸ್ಮಾರಕಗಳಿಗೆ ಸಂಬಂಧಿಸಿದ ಹಾಗೆ ಎಲ್ಲಾ ದಿಕ್ಕಿನಲ್ಲಿ ಒಳ ಹಾಗೂ ಹೊರಭಾಗದ ಹ ಛಾಯಾಚಿತ್ರಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಬೇಕು. ಸ್ಮಾರಕದ ಪ್ಲಾನ್, ಮುಂಭಾಗದ ನಕ್ಷೆ, ಹಾಗೂ ಸೆಕ್ ನಕ್ಷೆ (Plan, Section, Front Elevation, Scaled drawings)ಗಳನ್ನು ಕಡ್ಡಾಯವಾಗಿ ಅಳವಡಿಸಬೇಕು.

- ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಾಗಿ ಸ್ಮಾರಕದ ಮೂಲ ಭಾಗಗಳನ್ನು ಸಂರಕ್ಷಣೆಗೆ ಉಪಯೋಗಿಸತಕ್ಕದ್ದು. ಕಡಿಮೆ ಬ ಹೊಸದಾಗಿ ತಯಾರಿಸಿ ಅಳವಡಿಸಬೇಕು.

- ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು ಸ್ಮಾರಕಗಳಲ್ಲಿ ಆಗಿರುವ ಅನಧಿಕೃತ ಒತ್ತುವರಿಯನ್ನು ತೆಗೆದು ಬೇಲಿಗಳನ್ನು ಹಾಕುವ ಕ್ರಮ ಕೈಗೊಳ್ಳಬೇಕು.

- ಸಂರಕ್ಷಣಾ ಕಾಮಗಾರಿಯ ಟಿಪ್ಪಣಿಯು (Conservation Note) ಅವಶ್ಯಕವಾದುದು.

- ನಕ್ಷೆಯಲ್ಲಿ ಕಾಮಗಾರಿಯನ್ನು ಕೈಗೊಳ್ಳುವ ನಿಖರವಾದ ಅಳತೆಯನ್ನು (Sketch to Scale) ನಮೂದಿಸಬೇಕು.

- ತಾಂತ್ರಿಕ ಸಲಹಾ ಸಮಿತಿ ಸದಸ್ಯರು ನೀಡಿರುವ ಸಲಹೆ ಸೂಚನೆಗಳನ್ನು ಅಂದಾಜುಪಟ್ಟಿಗಳಲ್ಲಿ ಅಳವಡಿಸಿಕೊ ಕಾಮಗಾರಿಗಳನ್ನು ಕೈಗೊಳ್ಳುವ ಷರತ್ತಿಗೊಳಪಟ್ಟು ಈ ಕೆಳಕಂಡ ಸಂರಕ್ಷಣಾ ಕಾಮಗಾರಿಗಳ ಅಂದಾಜು ಪಟ್ಟಿಗ ಸಮಿತಿಯು ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡಿತು.

**ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ 2015-16ನೇ ಸಾಲ 12ನೇ ಹಂತದ ಕ್ರಿಯಾಯೋಜನೆಯಲ್ಲಿನ ಕಾಮಗಾರಿಗಳ ವಿವರ.**

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್(ರಿ)ನ ನಿರ್ದೇಶಕರು ಕರ್ನಾಟಕ ಸರ್ಕಾರದ ಪುರಾತ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಹಭಾಗಿತ್ವದೊಂದಿಗೆ ಟ್ರಸ್ಟ್‌ನ ವತಿಯಿಂದ 2002-03ನೇ ಸಾಲಿನಿಂದ ಸರ್ಕಾರದ ಶೇಕಡ 40%ರಷ್ಟು ಅನುದಾನ, ಟ್ರಸ್ಟ್ ವತಿಯಿಂದ ಶೇಕಡ 40%ರಷ್ಟು ಅನುದಾನ ಹಾಗೂ ಸ್ಥಳೀಯರಿಂದ ಶೇಕ 20%ರಷ್ಟು ಅನುದಾನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 138 ಪುರಾತನ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವ ಕೈಗೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಗಳಲ್ಲಿ ಇದುವರೆವಿಗೆ ಒಟ್ಟು 124 ಸ್ಮಾರಕಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತ ಉಳಿಕೆ 14 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಈ ಕಾಮಗಾರಿಯಗಳು ಪ್ರಸಕ್ತ ಆರ್ಥಿಕ ಸಾಲಿನ ಪೂರ್ಣಗೊಳಿಸಲಾಗುವುದೆಂಬುದಾಗಿ ತಿಳಿಸಿದರು.

ಪ್ರಸ್ತುತ 2015-16ನೇ ಸಾಲಿನ 12ನೇ ಹಂತದ ಕ್ರಿಯಾಯೋಜನೆಯಲ್ಲಿ ಒಟ್ಟು 14 ಕಾಮಗಾರಿಗಳನ್ನು ತೆಗೆದುಕೊಳ್ಳಲು ಆಯ್ಕೆ ಮಾಡಿಕೊಂಡಿದ್ದು, ಈ ಕಾಮಗಾರಿಗಳ ಕ್ರಿಯಾಯೋಜನೆ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಹಾಗೂ ಕಾಮಗಾರಿಗಳ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿ ತಾಂತ್ರಿಕ ಸಲಹಾ ಸಮಿತಿ ಸದಸ್ಯರ ಅವಗಾಹನೆಗೆ ಈಗಾಗಲೇ ಸಲ್ಲಿಸಲಾಗಿದೆ. ಈ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ಹಾಗೂ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ನೀಡಬೇಕೆಂದು ಕೋರಿದರು.

ತಾಂತ್ರಿಕ ಸಲಹಾ ಸಮಿತಿಯು ಅಂದಾಜು ಪಟ್ಟಿಗಳನ್ನು ಪರಿಶೀಲಿಸಿ, ಕೆಳಕಂಡ 14 ಕಾಮಗಾರಿಗಳ ಅಂದಾಜುಪಟ್ಟಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಿತು.

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| 1 | ಶ್ರೀ ಈಶ್ವರ ದೇವಸ್ಥಾನ, ದಂದೂರು, ತರೀಕೆರೆ ತಾಲ್ಲೂಕು | 15.00 |
| 2 | ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನ, ಸಿದ್ಧೇಶ್ವರದುರ್ಗ, ಚಳ್ಳಕೆರೆ ತಾಲ್ಲೂಕು | 28.00 |
| 3 | ಶ್ರೀ ಅನಂತನಾಥಸ್ವಾಮಿ ಬಸದಿ, ಸಿದ್ಧಕಟ್ಟೆ, ಬಂಟ್ವಾಳ ತಾಲ್ಲೂಕು | 15.00 |
| 4 | ಶ್ರೀ ಈಶ್ವರ ದೇವಸ್ಥಾನ, ಹೆಬ್ಬಾಳೆ, ಅರಕಲಗೂಡು ತಾಲ್ಲೂಕು | 23.00 |
| 5 | ಶ್ರೀ ಪರವಾಸುದೇವರ ದೇವಸ್ಥಾನ, ಗೊರೂರು, ಅರಕಲಗೂಡು ತಾಲ್ಲೂಕು | 38.00 |
| 6 | ಶ್ರೀ ರಾಮೇಶ್ವರ ದೇವಸ್ಥಾನ, ರಾಮನಾಥಪುರ, ಅರಕಲಗೂಡು ತಾಲ್ಲೂಕು | 36.00 |
| 7 | ಶ್ರೀ ಲಕ್ಷ್ಮೀಕಾಂತ ದೇವಸ್ಥಾನ, ಮುದುಡಿ, ಅರಸೀಕೆರೆ ತಾಲ್ಲೂಕು | 45.00 |
| 8 | ಶ್ರೀ ಕಲ್ಲೇಶ್ವರ ದೇವಸ್ಥಾನ, ಕಣಕಟ್ಟೆ, ಅರಸೀಕೆರೆ ತಾಲ್ಲೂಕು | 27.00 |
| 9 | ಶ್ರೀ ಕಲ್ಲೇಶ್ವರ ದೇವಸ್ಥಾನ, ಮೈದೂರ, ರಾಣೆಬೆನ್ನೂರು ತಾಲ್ಲೂಕು | 24.00 |
| 10 | ಶ್ರೀ ಮಲ್ಲೇಶ್ವರ ದೇವಸ್ಥಾನ, ಅಟ್ಟುಪ್ಪೆ, ಕೆ.ಆರ್.ಪೇಟೆ ತಾಲ್ಲೂಕು | 40.00 |
| 11 | ಶ್ರೀ ವೀರಭದ್ರ ದೇವಸ್ಥಾನ, ಬಸವಾಪುರ, ಹೊಸನಗರ ತಾಲ್ಲೂಕು | 32.00 |
| 12 | ಶ್ರೀ ಚೆನ್ನಕೇಶವ ದೇವಸ್ಥಾನ, ನಾರಾಯಣಕೆರೆ, ತುಮಕೂರು ತಾಲ್ಲೂಕು | 30.00 |
| 13 | ಶ್ರೀ ಈಶ್ವರ ದೇವಸ್ಥಾನ, ನಂದಿಕಟ್ಟೆ, ಮುಂಡಗೋಡ ತಾಲ್ಲೂಕು | 32.00 |
| 14 | ಶ್ರೀ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ತೇರಹಳ್ಳಿ, ಕೊಂಡರಾಜನಹಳ್ಳಿ ಪಂಚಾಯ್ತಿ, ಕೋಲಾರ ತಾಲ್ಲೂಕು. | 45.00 |

<u>ಶ್ರೀ ಸೌಮ್ಯಸೋಮೇಶ್ವರ ದೇವಾಲಯ ಸಂರಕ್ಷಣೆಯ ಅಂದಾಜುಪಟ್ಟಿಯ ತಾಂತ್ರಿಕ ಅನುಮೋದನೆ :</u>

ಸರ್ಕಾರಿ ಆದೇಶ ಸಂಖ್ಯೆ:ಕಸಂವಾ/63/ಕೆಎಂಯು/2014, ದಿನಾಂಕ 09.09.2014, ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ನಿಂಬಾಪುರ ಗ್ರಾಮದಲ್ಲಿರುವ ಶ್ರೀ ಸೌಮ್ಯಸೋಮೇಶ್ವರ ದೇವಾಲಯ ಸಂರಕ್ಷಣೆಯನ್ನು ಮೆ: ಜೆ.ಎಸ್.ಡಬ್ಲ್ಯೂ ಫೌಂಡೇಷನ್, ಮುಂಬೈ ಇವರ ಸ್ವಂತ ವೆಚ್ಚದಲ್ಲಿ ಕೈಗೊಳ್ಳಲು ಅನುಬಂಧ-2ರಲ್ಲಿನ ನಿಭಂದನೆಗಳನ್ನು ಪಾಲಿಸುವ ಷರತ್ತುಗೊಳಪಟ್ಟು ಅನುಮತಿಯನ್ನು ನೀಡಲಾಗಿತ್ತು.

ಈ ಆದೇಶದನ್ವಯ ದಿನಾಂಕ 30.10.2014ರಂದು ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜೆ.ಎಸ್.ಡಬ್ಲ್ಯೂ ಫೌಂಡೇಶನ್ ಸಂಸ್ಥೆಯು ಒಡಂಬಡಿಕೆಗೆ ಸಹಿ ಮಾಡಲಾಗಿದ್ದು, ಒಡಂಬಡಿಕೆಯ ನಿಬಂಧನೆಯ ಕ್ರಮ ಸಂಖ್ಯೆ (2)ರನ್ವಯ ಸಂರಕ್ಷಣಾ ಕಾಮಗಾರಿಯನ್ನು ನಿರ್ವಹಿಸಿ ಅನುಭವವಿರುವ ಸಂಸ್ಥೆಯಾದ ಶ್ರೀ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ನ ವತಿಯಿಂದ ಕೈಗೊಳ್ಳಲು ತಾಂತ್ರಿಕ ಸಲಹ ಸಮಿತಿಯ ತಾಂತ್ರಿಕ ಅನುಮೋದನೆಗಾಗಿ ಮಂಡಿಸಲಾಗಿದ್ದು, ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದ ನೀಡಲಾಯಿತು.

ರಾಜ್ಯ ಯೋಜನೆಯಡಿಯಲ್ಲಿನ ಕಾಮಗಾರಿಗಳು

| | | |
|---|---|---|
| | **ಲೆಕ್ಕಶೀರ್ಷಿಕೆ: 2205-00-103-0-01 (ಯೋಜನೆ)** | |
| 1 | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ದೊಡ್ಡಿಂದವಾಡಿ ಗ್ರಾಮದ ಶ್ರೀ ನಂಜುಂಡೇಶ್ವರ ದೇವಸ್ಥಾನ ಸಂರಕ್ಷಣಾ ಕೆಲಸ. | 53.00 |
| 2 | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಬಂಡಳ್ಳಿ ಗ್ರಾಮದ ಶ್ರೀ ಚನ್ನಿಗರಾಯಸ್ವಾಮಿ ದೇವಸ್ಥಾನ ಸಂರಕ್ಷಣಾ ಕೆಲಸ. | 41.00 |

(5)



| | | |
|---|---|---|
| 3 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಗುಂಗ್ರಾಲ್ ಛತ್ರದ ಈಶ್ವರ ದೇವಸ್ಥಾನದ 2ನೇ ಹಂತದ ಕಾಮಗಾರಿ. | 50.00 |
| 4 | ಮಂಡ್ಯ ಜಿಲ್ಲೆ ಕೆ.ಆರ್ ಪೇಟೆ ತಾಲ್ಲೂಕು ಸಿಂಧಘಟ್ಟ ಶ್ರೀ ಮಾರಮ್ಮ ದೇವಾಲಯದ ಸಂರಕ್ಷಣೆ. | 39.00 |
| | **ಲೆಕ್ಕಶೀರ್ಷಿಕೆ:2205-00-103-0-21 (ಯೋಜನೆ)** | |
| 5 | ಮೈಸೂರು ಜಿಲ್ಲೆ, ಅರಮನೆ ಆವರಣದಲ್ಲಿರುವ ಶ್ರೀ ಶ್ವೇತವರಹಾ ಸ್ವಾಮಿ ದೇವಾಲಯದಲ್ಲಿನ ಪಾರಂಪರಿಕ ಗೋಡೆ ಚಿತ್ರದ ಸಂರಕ್ಷಣೆ ಕಾಮಗಾರಿ (Mural Paintings) | 23.00 |
| 6 | ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕು, ದೇಗುಲಹಳ್ಳಿಯಲ್ಲಿರುವ ಶ್ರೀ ಈಶ್ವರ ದೇವಾಲಯ ಸಂರಕ್ಷಣಾ ಕಾಮಗಾರಿ. | 20.50 |
| 7 | ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲ್ಲೂಕು, ನೀರಲಗಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ (ಸಿದ್ಧರಾಮೇಶ್ವರ) ದೇವಾಲಯದ ಸಂರಕ್ಷಣಾ ಕಾಮಗಾರಿ. (ಕಾಂಪೌಂಡ್ ಗೋಡೆ). | 9.00 |
| 8 | ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ನಗರದಲ್ಲಿರುವ ನೂರ್‌ಬಾಗ್ (3 ಸಂಖ್ಯೆ) ಗುಂಬಜ್‌ಗಳ ಸಂರಕ್ಷಣಾ ಕಾಮಗಾರಿ. | 29.00 |
| 9 | ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕು, ಮುದನೂರ್ ಗ್ರಾಮದ ಶ್ರೀ ದೇವರ ದಾಸಿಮಯ್ಯ ದೇವಾಲಯದ ಸಂರಕ್ಷಣಾ ಕಾಮಗಾರಿ. | 80.00 |
| 10 | ಗುಲ್ಬರ್ಗಾ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಮಳಖೇಡದಲ್ಲಿರುವ ಕೋಟೆಯ ಸಂರಕ್ಷಣಾ ಕಾಮಗಾರಿ. | 480.00 |
| | **ಲೆಕ್ಕ ಶೀರ್ಷಿಕೆ: 2205-00-107-0-01 (ಯೋಜನೆ) 059 ಇತರೆ ಖರ್ಚು** | |
| 11 | ಮೈಸೂರು ನಗರ ವೆಲ್ಲಿಂಗ್‌ಟನ್ ವಸ್ತುಸಂಗ್ರಹಾಲಯದ ಉದ್ಯಾನವನ ನಿರ್ಮಾಣ ಮತ್ತು ಅಭಿವೃದ್ಧಿ ಕೆಲಸ. | 10.00 |
| 12 | ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಚಾಮರಾಜೇಂದ್ರ ಸ್ಮರಣಾರ್ಥ ಸರ್ಕಾರಿ ವಸ್ತುಸಂಗ್ರಹಾಲಯದ ಕಟ್ಟಡ ನಿರ್ಮಾಣ ಮತ್ತು ಅಭಿವೃದ್ಧಿ ಕೆಲಸ. | 20.00 |
| 13 | ಮಡಿಕೇರಿ ಜಿಲ್ಲೆ, ಮಡಿಕೇರಿಯಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ ಕೆಲಸ. | 12.00 |
| 14 | ಮಂಗಳೂರು ಜಿಲ್ಲೆ ಬಿಜೈನಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ ಕಾಮಗಾರಿ ಹಾಗೂ ಉದ್ಯಾನವನದ ನಿರ್ಮಾಣದ ನಿರ್ವಹಣೆ. | 42.00 |
| 15 | ಗದಗ ಜಿಲ್ಲೆ, ಗದಗ ತಾಲ್ಲೂಕು, ಗದಗದಲ್ಲಿರುವ ವಸ್ತುಸಂಗ್ರಹಾಲಯದ ಉದ್ಯಾನವನದ ನಿರ್ವಹಣೆ ಕಾಮಗಾರಿ. | 07.00 |
| 16 | ಬೀದರ ಜಿಲ್ಲೆ, ಬಸವಕಲ್ಯಾಣ ಸರ್ಕಾರಿ ವಸ್ತುಸಂಗ್ರಹಾಲಯದ ವಾರ್ಷಿಕ ನಿರ್ವಹಣೆ ಹಾಗೂ ಅಭಿವೃದ್ಧಿ ಸಂರಕ್ಷಣಾ ಕಾಮಗಾರಿ. | 10.50 |
| 17 | ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ನಗರದಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಉದ್ಯಾನವನ ನಿರ್ವಹಣೆ ಹಾಗೂ ಅಭಿವೃದ್ಧಿ ಸಂರಕ್ಷಣಾ ಕಾಮಗಾರಿ. | 07.00 |
| 18 | ಬೆಂಗಳೂರು ಕಸ್ತೂರಿ ಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದ ಪೂರಕ ಕಟ್ಟಡದ ಮೊದಲ ಮಹಡಿಯಲ್ಲಿ ಪುರಾತತ್ವ ಸಂಗ್ರಹಗಳ ಕೊಠಡಿ ಅಭಿವೃದ್ಧಿ | 33.50 |
| 19 | ಶಿವಮೊಗ್ಗ ಜಿಲ್ಲೆ ಶಿವಪ್ಪನಾಯಕನ ಅರಮನೆ ಹಿಂಭಾಗದ ಕಟ್ಟಡದ ಅಭಿವೃದ್ಧಿ ಕಾಮಗಾರಿ | 24.00 |
| | **ಲೆಕ್ಕಶೀರ್ಷಿಕೆ: 2205-00-107-0-01 (ಯೋಜನೆ) 200 ನಿರ್ವಹಣೆ** | |
| 20 | ಮೈಸೂರಿನ ಕೇಂದ್ರ ಕಛೇರಿಯ ಕಲಾ ಗ್ಯಾಲರಿಗೆ ಎಲ್.ಇ.ಡಿ. ಲೈಟ್‌ಗಳು ಮತ್ತು ವಿದ್ಯುಚ್ಛಕ್ತಿ ಹಾಗೂ ಹವಾನಿಯಂತ್ರಣ ಅಳವಡಿಸುವ ಕೆಲಸ. | 27.50 |
| 21 | ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿ ವೆಂಕಟಪ್ಪ ಚಿತ್ರಶಾಲೆಯ ಆವರಣದಲ್ಲಿನ ಉದ್ಯಾನವನ ನಿರ್ವಹಣೆ | 15.00 |
| 22 | ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿ ಸರ್ಕಾರಿ ವಸ್ತುಸಂಗ್ರಹಾಲಯದ ಆವರಣದ ಸುತ್ತಲೂ ಡಾಂಬರೀಕರಣ ಕೆಲಸ | 30.00 |
| 23 | ಬಳ್ಳಾರಿ ಜಿಲ್ಲೆ, ಹೂವಿನ ಹಡಗಲಿ ತಾಲ್ಲೂಕಿನಲ್ಲಿರುವ ಹೂವಿನಹಡಗಲಿ ಸರ್ಕಾರಿ ವಸ್ತುಸಂಗ್ರಹಾಲಯದ ಉದ್ಯಾನವನ ನಿರ್ವಹಣೆ ಕಾಮಗಾರಿ ಕೆಲಸ | 8.50 |
| | **ಲೆಕ್ಕಶೀರ್ಷಿಕೆ: 2205-00-103-0-25 (ಯೋಜನೆ)** | |
| 24 | ಧಾರವಾಡದಲ್ಲಿರುವ ಪಾರಂಪರಿಕ ಲಿಂಗಾಯತ ಭವನದ ಸಂರಕ್ಷಣಾ ಕಾಮಗಾರಿ. | 130.00 |

ಕ್ರಮ ಸಂಖ್ಯೆ-೨೮ರ ಮೈಸೂರು ಜಿಲ್ಲೆ, ಅರಮನೆ ಆವರಣದಲ್ಲಿರುವ ಶ್ರೀ ಶ್ವೇತವರಹಾ ಸ್ವಾಮಿ ದೇವಾಲಯದಲ್ಲಿನ ಪಾರಂಪರಿಕ ಗೋಡೆ ಚಿತ್ರದ (Mural Paintings) ಸಂರಕ್ಷಣೆ ಕಾಮಗಾರಿಯನ್ನು ಮೆ:ರೀಜನಲ್ ಕನ್ಸರ್‌ವೇಷನ್ ಲ್ಯಾಬೋರೇಟರಿ, ಸಿದ್ಧಾರ್ಥನಗರ, ಮೈಸೂರು ಇವರ ಮುಖಾಂತರ ಕೈಗೊಳ್ಳಲು ಅನುಮತಿಯನ್ನು ನೀಡಿತು.

ಪಿ.ಡಿ.ಖಾತೆಯಡಿ

| | | |
|---|---|---|
| 25 | ಮೈಸೂರು ನಗರದ ಸಂತ ಫಿಲೋಮಿನ ಚರ್ಚ್‌ನ ಸಂರಕ್ಷಣಾ ಕೆಲಸ. | 270.00 |

ಈ ಕಾಮಗಾರಿಗೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂಖ್ಯೆ:ಪ್ರಇ/09/ಪ್ರ.ವಾ.ಯೋ/2015, ಬೆಂಗಳೂರು ದಿನಾಂಕ:21.01.2015ರ ಆದೇಶದಲ್ಲಿ ಮೈಸೂರು ನಗರದ ಸೆಂಟ್ ಫಿಲೋಮಿನಾ ಚರ್ಚ್ ದುರಸ್ಥಿಗೊಳಿಸುವ ಕಾಮಗಾರಿಯನ್ನು ಕೈಗೊಳ್ಳಲು ರೂ.270.00ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ರೂ.120.00ಲಕ್ಷಗಳ ಅನುದಾನವನ್ನು ಈ ಇಲಾಖೆಗೆ ಬಿಡುಗಡೆ ಮಾಡಿರುತ್ತಾರೆ. ಈ ಕಾಮಗಾರಿಗೆ ಸಿದ್ಧಪಡಿಸಿರುವ ರೂ.270.00ಲಕ್ಷಗಳ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಯಿತು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಅಧ್ಯಕ್ಷರು, ಸದಸ್ಯರುಗಳು ಹಾಗೂ ಎಲ್ಲಾ ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

( ಡಾ॥ಸಿ.ಜಿ.ಬೆಟಸೂರಮಠ, ಕ.ಆ.ಸೇ.)
ಆಯುಕ್ತರು,
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು
ಇಲಾಖೆಯ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿ
ಸದಸ್ಯರು

(ಬಿ.ಜಿ.ನಂದಕುಮಾರ್, ಭಾ.ಆ.ಸೇ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆಯ ತಾಂತ್ರಿಕ ಮತ್ತು ಆಡಳಿತಾತ್ಮಕ
ಮಂಜೂರಾತಿ ಸಮಿತಿ ಅಧ್ಯಕ್ಷರು

(ಡಾ॥ಜಿ.ಅಶ್ವತ್ಥನಾರಾಯಣ)
ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು,
ಲೋಕೋಪಯೋಗಿ ಇಲಾಖೆ ಹಾಗೂ ಪುರಾತತ್ವ
ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ತಾಂತ್ರಿಕ
ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿಯ ಅಧಿಕಾರೇತರ
ಸಮಿತಿ ಸದಸ್ಯರು

(ಡಾ॥ಹೆಚ್.ಎಂ.ಸಿದ್ದನಗೌಡರ್)
ನಿವೃತ್ತ ನಿರ್ದೇಶಕರು (ವಸ್ತುಸಂಗ್ರಹಾಲಯಗಳು) ಹಾಗೂ
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ
ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿಯ
ಅಧಿಕಾರೇತರ ಸಮಿತಿ ಸದಸ್ಯರು

(ಡಾ॥ಎಸ್.ವಿ.ವೆಂಕಟೇಶಯ್ಯ)
ನಿವೃತ್ತ ಪ್ರಾಂತೀಯ ನಿರ್ದೇಶಕರು
ಭಾರತೀಯ ಪುರಾತತ್ವ ಸರ್ವೇಕ್ಷಣೆ ಹಾಗೂ
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಸಮಿತಿಯ
ಅಧಿಕಾರೇತರ ಸಮಿತಿ ಸದಸ್ಯರು